ಗುತ್ತದೆ. ಅದು ಇರಾಖೆಗೆ ಹೋಗುವುದರಲ್ಲಿ ನಿಧಾನವಾಗುತ್ತದೆ. ಅದಕ್ಕೋಸ್ಕರ ಜವಾನರ ಮೂಲಕ ಸರ್ಕಾರದ ಇರಾಖೆಗೆ ನೇರವಾಗಿ ಹೋಗುವಂತೆ ಪ್ರಶ್ನೆಗಳನ್ನು ಕಳಿಸಿದರೆ ಇನ್ನೂ ಸ್ವಲ್ಪ ಬೇಗ ಉತ್ತರಗಳು ಬರಬರುದು ಎಂದು ನನಗನ್ನಿಸುತ್ತದೆ.

Mr. CHAIRMAN.—I refer to rule 38 (2). This is the only rule and I do not think there is any time limit prescribed. Even then I assure the House that I will try to expedite the matter.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬಡ್ಜೆಟ್ ಮೇಲಿನ ಚರ್ಚೆ ಇನ್ನೂ ಎಷ್ಟು ದಿವಸ, ನಡೆಯುತ್ತದೆ. ಈ ಅಧಿವೇಶನ ನಡೆಯುವುದು ಇನ್ನು ಎಷ್ಟು ದಿವಸ ಈ ವಿಚಾರಗಳನ್ನು ನಭೆಗೆ ತಿಳಿಸಿದರೆ ಒಳ್ಳೆಯದು.

ಶ್ರೀ ಕೆ. ಎ. ಶಂಕರಗೌಡ.—ಬಡ್ಜೆಟ್ ಮೇಲಿನ ಚರ್ಚೆ ಸೋಮವಾರ, ಮಂಗಳವಾರ ನಡೆಯುತ್ತದೆ. ಬುಧವಾರ ಅಪ್ರೊಪ್ರಿಯೇಷನ್ ಬಿಲ್ (ವೋಟ್ ಆನ್ ಅಕೌಂಟ್) ಬರುತ್ತದೆ, ಗುರುವಾರ ಖಾನಗಿ ಕಾರ್ಯಕಲಾಪಗಳಿರುತ್ತವೆ, ಶುಕ್ರವಾರ ನಪ್ಲಿಮೆಂಟರಿ ಗ್ರಾಂಟ್ಸ್ ಮೇಲೆ ಚರ್ಚೆ ನಡೆಯುತ್ತದೆ, ಶನಿವಾರ ಅಪ್ರೊಪ್ರಿಯೇಷನ್ ಮೇಲೆ ಚರ್ಚೆ ನಡೆಯುತ್ತದೆ. ಆದ್ದರಿಂದ ಶನಿವಾರದವರೆಗೂ ನಭೆ ನಡೆಯುತ್ತದೆಂದು ಹೇಳಬಹುದು.

Mr. CHAIRMAN.—The House will now rise and meet at 10-35.

The House rose at Five Minutes past Ten of the Clock to re-assemble at Thirty-five Minutes past Ten of the Clock.

The House re-assembled at Forty Minutes past Ten of the Clock.

[MR. DEPUTY CHAIRMAN in the Chair]

BUDGET ESTIMATES FOR 1968-69

(General Discussion)

Debate Contd.

† ಶ್ರೀ ಕೆ. ಕಾಂತಪ್ಪ ಶೆಟ್ಟಿ (ವಿಧಾನಸಭಾ ಕ್ಷೇತ್ರ).—ಮಾನ್ಯ ನಭಾಪತಿಗಳೇ, ನಮ್ಮ ಆರ್ಥ ನಚಿವರು ನಮ್ಮ ರಾಜ್ಯದ ಹಣಕಾಸಿನ ವಿಷಯದಲ್ಲಿ ಒಂದು ವಾಸ್ತವಿಕ ಚಿತ್ರವನ್ನಿಟ್ಟಿದ್ದಾರೆ. ನಮ್ಮ ವಿರೋಧ ಪಕ್ಷದವರು ಅಂಕಿಸಂಖ್ಯೆಗಳಲ್ಲೇನೋ ಜಗ್ಗರಿಮಾಡಿದ್ದಾರೆಂದು ಹೇಳಿದ್ದಾರೆ. ಅಂಥ ಜಾದೂಗಿರಿದು ಏನೂ ಇಲ್ಲ, ವಾಸ್ತವವಾಗಿ 1962 ರಿಂದ 5 ವರ್ಷ ರಾಜ್ಯದ ಮತ್ತು ದೇಶದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸಾಮಾನ್ಯವಾಗಿ ನಿರೂಪಿಸಿ, ಇನ್ನುಮುಂದೆ ರಾಜ್ಯದ ಹಣ ಕಾಸಿನ ಪರಿಸ್ಥಿತಿ ಮತ್ತು ಸಾಂಪತ್ತಿಕ ಸ್ಥಿತಿ ಸುಧಾರಿಸುತ್ತದೆ ಎಂಬ ಚಿಹ್ನೆ ತೋರಿಬರುತ್ತಿದೆ ಎಂಬ ಆಶಾವಾದವನ್ನು ವ್ಯಕ್ತಪಡಿಸಿದ್ದಾರೆ. ಬೇರೆಯವರ ವಿಷಯದಲ್ಲಾದರೂ ಏನಾದರೂ ಜಾದು ಮಾಡಬಹುದು, ಮುಚ್ಚುಮರೆ ಮಾಡಬಹುದು ಎಂದು ಆರೋಪಿಸಬಹುದು ; ಆದರೆ ಶ್ರೀ ಹೆಗಡೆ ಯವರ ವಿಷಯದಲ್ಲಿ ಅಂಥಾದ್ದನ್ನು ಹೇಳುವುದಕ್ಕೆ ಬರುವುದಿಲ್ಲ. ಅವರು ಪೊದಲನೆಯದಾಗಿ ಮದ್ಯಪಾನ ನಿಷೇಧವನ್ನು ತೆಗೆದುಹಾಕಿ ವಾಸ್ತವಿಕ ದೃಷ್ಟಿಯನ್ನು ಧೈರ್ಯಮಾಡಿ ಯಾವವಿಧವಾದ ಮುಚ್ಚುಮರೆಯಿಲ್ಲದೆ ಸ್ಪಷ್ಟವಾಗಿ ಹೇಳುವವರು, ಅದರಂತೆ ಹೇಳಿದ್ದಾರೆ ಎಂಬುದು ನನ್ನ ಅಭಿ ಪ್ರಾಯ. ಅವರು ಯಾವ ವಿಷಯವನ್ನೂ ತಮ್ಮ ಭಾಷಣದಲ್ಲಿ ಮುಚ್ಚುಮರೆಯಿಲ್ಲದೆ ತಿಳಿಸಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ, ನಾವು ಎದುರಿಸಬೇಕಾದ ಸಂಕಟ, ನಮ್ಮ ಆದಳಿತವೆರ್ಚಾ ಗುವ ವಿಳಂಬ ಮುಂತಾದ್ದನ್ನೆಲ್ಲಾ ಚೆನ್ನಾಗಿ ಮನಗಂಡು ಅದನ್ನು ತಕ್ಕಮಟ್ಟಿಗೆ ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆಂದು ಹೇಳಬಹುದು. 5 ವರ್ಷಗಳಲ್ಲಿ ಇದುವರೆಗೆ ದೇಶ ಮತ್ತು ರಾಜ್ಯ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಇನ್ನು ಮುಂದೆ ವಿರೋಧ ಪಕ್ಷದ ಸದಸ್ಯರಾದ

(ಶ್ರೀ ಕೆ. ಕಾಂತಪ್ಪ ಶೆಟ್ಟಿ)

ಶ್ರೀಮಾನ್ ಶ್ರೀನಿವಾಸಶೆಟ್ಟರು ಹೇಳಿದಹಾಗೆ ರಾ ಅಂಡ್ ಆರ್ಡರ್ ಕಳಚಿ ಬಿದ್ದು ಅನಾಯಕತ್ವ ತಲೆದೋರುವ ಪರಿಸ್ಥಿತಿ ಇಲ್ಲ, ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕೆಲವೊಂದು ವಿಶಿಷ್ಟ ಪರಿಸ್ಥಿತಿಗಳಲ್ಲಿ ವಿಷಮ ಸ್ಥಿತಿಗತಿ ಒದಗಿಬರಬಹುದು, ಕೆಲವು ಸಂದರ್ಭಗಳಲ್ಲಿ ಕೆಲವು ರಾಜಕೀಯ ಕಾರಣಗಳಿಗಾಗಿ ವಿದ್ಯಾರ್ಥಿಗಳು ಅಥವಾ ಇತರರು ಕೆಲವರು ಉದ್ಯೋಗಗೊಂಡು ಕೆಲವು ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಬಹುದು. ಅದನ್ನೇ ದೊಡ್ಡದು ಮಾಡಿ ರಾಜ್ಯದಲ್ಲಿ ಅನಾಯಕತ್ವ ಉಂಟಾಗಿದೆ, ರಾ ಅಂಡ್ ಆರ್ಡರು ಇಲ್ಲವೇ ಇಲ್ಲ, ಪೋಲೀಸು ಖಾತೆ ಕುಸಿದು ಅಧೋಗತಿ ಉಂಟಾಗಿದೆ ಎಂದು ಹೇಳುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಯಾವುದೋ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಗಲಾಟೆಯಾಗುವುದು ಸ್ವಾಭಾವಿಕ, ಅದು ಎಲ್ಲ ದೇಶಗಳಲ್ಲೂ ಉಂಟು. ಭಿನ್ನಾಭಿಪ್ರಾಯವುಂಟಾದಾಗ, ಬಿಕ್ಕಟ್ಟಿನ ಪರಿಸ್ಥಿತಿ ಉಂಟಾದಾಗ ಸ್ವಲ್ಪ ಆಂದೋಳನ ನಡೆದು ನಂತರ ಅದು ಉಪಶಮನವಾಗುವುದುಂಟು. ನಮ್ಮ ದೇಹದಲ್ಲಿ ಏನಾದರೂ ಒಂದು ರೋಗವುಂಟಾಗಿ ಅದು ಉಲ್ಬಣಿಸಿದರೆ ನಾವು ಸಾಯುತ್ತೇವೆ, ಬದುಕುವುದಿಲ್ಲ ಎಂದು ನಿರಾಸೆ ಹೊಂದಬೆ ಔಷಧೋಪಚಾರಗಳನ್ನು ಮಾಡುವಂತೆ ದೇಶದಲ್ಲೂ ಏನಾದರೂ ವಿಶೇಷ ಪರಿಸ್ಥಿತಿಯೊದಗಿದಾಗ ಬಿಕ್ಕಟ್ಟುಂಟಾದಾಗ ರಾ ಅಂಡ್ ಆರ್ಡರ್ ಕೆಳಮಟ್ಟಕ್ಕೆ ಬಂದರೆ ಅದನ್ನೇ ಪರ್ವತ ಮಾಡಿ ಉತ್ಪ್ರೇಕ್ಷೆ ಮಾಡಿ ಸದಸ್ಯರು ಬೊಬ್ಬೆ ಎಬ್ಬಿಸುವುದು ಸರಿಯಲ್ಲ. ಜವಾಬ್ದಾರಿಯುತರಾಗಿ ಕೆಲಸಮಾಡುವವರು ಇಂಥ ಮನೋವ್ಯಥೆಯನ್ನವಲಂಬಿಸುವುದು ಸೂಕ್ತವಲ್ಲ ಎಂದು ನನಗೆ ತೋರುತ್ತದೆ. ಆದುದರಿಂದ ನಮ್ಮ ವಿರೋಧ ಪಕ್ಷದ ಸದಸ್ಯರು ಜವಾಬ್ದಾರಿಯುಳ್ಳವರೂ, ಅನುಭವನ್ವರೂ ಆಗಿರುವಾಗ ಒಂದು ವಿಶೇಷ ಪರಿಸ್ಥಿತಿ ಉಂಟಾದಾಗ ಅದನ್ನು ಶಮನಮಾಡುವುದಕ್ಕೆ ಅಥವಾ ಕಡಮೆಮಾಡುವುದಕ್ಕೆ ಪ್ರಯತ್ನಮಾಡಬೇಕೇ ಹೊರತು ಅದನ್ನೇ ದೊಡ್ಡದು ಮಾಡಿ ಗಲಾಟೆಮಾಡಬಾರದು, ಮಧುಗಿರಿಯಲ್ಲಿ ಅಥವಾ ಬೆಂಗಳೂರಿನಲ್ಲಿ ಅಥವಾ ಬೇರೆ ಕಡೆ ಗಲಾಟೆಯಾದರೆ ಸರಿಯಾಗಿ ವಿಚಾರಿಸಿ ಎರಡುಕಡೆಯ ಅಭಿಪ್ರಾಯಗಳನ್ನು ಗಮನಿಸಿ ಒಂದು ರೀತಿಯ ನಿರ್ಧಾರಕ್ಕೆ ಬರಬೇಕು. ಹಾಗೆ ಮಾಡದೆ ಉರಿಯುವ ಬೆಂಕಿಗೆ ತುಪ್ಪ ಹಾಕುವುದು ಉಚಿತವಲ್ಲ. ಹಾಗೆ ಮಾಡದಿದ್ದರೆ ಅನಾಯಕತ್ವ ಮನೋಭಾವವನ್ನು ಹೆಚ್ಚಿಸುವುದಕ್ಕೆ ನಾವು ಕಾರಣರಾಗುತ್ತೇವೆ ಎಂಬುದು ನನ್ನ ಅಭಿಪ್ರಾಯ.

ನಮ್ಮ ಅರ್ಥ ಸಚಿವರು ಕೈಗಾರಿಕೆ, ಕೃಷಿ, ವಿದ್ಯಾಭ್ಯಾಸ ಮುಂತಾದ ಕ್ಷೇತ್ರಗಳಲ್ಲಿ ಅದ ಪ್ರಗತಿಯನ್ನು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ನರ್ವೇಸಾಧಾರಣವಾಗಿ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ನೌಕರಶಾಹಿಯಿಂದ ನಮಗೆ ಹೆಚ್ಚಿನ ತೊಡಕುಂಟಾಗಿದೆ. ಆತ್ಮವಿಶ್ವಾಸವಿಲ್ಲದಿದ್ದರೆ ಪ್ರಜಾರಾಜ್ಯ ಕಟ್ಟುವುದು ಕಷ್ಟ, ನೌಕರರಲ್ಲಿ ನಿಷ್ಠೆಯಿರಬೇಕು. ನಾವು ಮಾತನಾಡುವಾಗ ಒಂದು ಹೇಳುವುದು, ಮಂತ್ರಿಗಳ ಕೈಲಿ ಇನ್ನೊಂದು ರೀತಿಯಲ್ಲಿ ಹೇಳುವುದು ಸರಿಯಲ್ಲ. ಇದ್ದುದ್ದನ್ನು ಇದ್ದಹಾಗೆ ಹೇಳಬೇಕೆಂಬ ಮನೋಭಾವ ಬರುವವರೆಗೆ ಕಷ್ಟ. ಆಗಾಗ್ಗೆ ಬದಲಾಯಿಸುವ ಮನೋಭಾವವಿದ್ದರೆ ಕಷ್ಟ. ಹಾಗಿರುವ ವರೆಗೂ ಪ್ರಜಾರಾಜ್ಯದಲ್ಲಿ ಜನರಿಗೆ ಹೆಚ್ಚಿನ ಸಹಾಯವಾಗುವುದಿಲ್ಲ, ಆಗುವುದಕ್ಕೆ ಸಾಧ್ಯವಿಲ್ಲ ಎಂಬುದು ನನ್ನ ನಿರ್ಧಾರ. 1948 ರಲ್ಲಿ ಶ್ರೀಮಾನ್ ಕಾರಂತರು ಮದ್ರಾಸಿನಲ್ಲಿ ಕಂದಾಯ ಮಂತ್ರಿಗಳಾಗಿದ್ದಾಗ ಮಂಗಳೂರಿಗೆ ಬಂದಿದ್ದರು. ಆಗ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವಾಗ ಜನರಿಗೆ ತಾವು ಕೊಡುವ ಸಹಾಯ, ವಾಗ್ದಾನ ಪೂರೈಸುವುದರಲ್ಲಿ ವಿಫಲರಾದರೆ ಜನರು ಅದನ್ನು ತಪ್ಪಾಗಿ ಭಾವಿಸಬಾರದು ಅದಕ್ಕೆ ಅನೇಕ ಕಾರಣಗಳಿರುತ್ತವೆ ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ಆದು ವಾಸ್ತವವಾದುದು, ಇವತ್ತಿಗೂ ಸರಕಾರ ನೀಡುವ ಸಹಾಯ ಜನತೆಗೆ ತಲುಪುವುದರಲ್ಲಿ ಬಹಳ ವಿಳಂಬವಾಗುತ್ತಿದೆ ಎಂದು ಹೇಳಬಹುದು. ನಮ್ಮ ಸರಕಾರದವರು, ಆಡಳಿತದ ಜವಾಬ್ದಾರಿ ವಹಿಸಿರುವವರು, ಪಕ್ಷದವರು ಅಥವಾ ಮಂತ್ರಿಮಂಡಲದವರು ಈಗಿರುವ ಆಡಳಿತ ಹಿಂದೆ ಬ್ರಿಟೀಷರಾಯನ ಕಾಲದ್ದು, ಪೋಲೀಸು ರಾಜ್ಯದಲ್ಲಿ ತಯಾರಾಗಿ ತುಕ್ಕು ಹಿಡಿದಿರತಕ್ಕದ್ದು. ಜನರಿಗೆ ಸಹಾಯಮಾಡಬೇಕು ಎಂಬ ಮನೋಭಾವನೆ ಈಗಿರುವ ನೌಕರರಲ್ಲಿಲ್ಲ, ಮತ್ತೆ ಮತ್ತೆ ಹೊಸ ಪ್ರಾಜೆಕ್ಟುಗಳನ್ನು ತೆಗೆದುಕೊಂಡರೆ, ಇರಾಖೆಗಳನ್ನು ಹೆಚ್ಚಿಸಿದರೆ ಅದರಿಂದ ನೌಕರರ ಸಂಖ್ಯೆ ಹೆಚ್ಚುತ್ತದೆ ಅಷ್ಟೇ ಹೊರತು ಜನತೆಗೆ ಹೆಚ್ಚು ಪ್ರಯೋಜನವಾಗುವುದಿಲ್ಲ ಎಂಬುದನ್ನು ಗಮನಿಸಬೇಕು. ನೌಕರರ ಮನೋಭಾವನೆ ಬದಲಾಗುವವರೆಗೆ ಯಾವ ಪ್ರಜಾರಾಜ್ಯವೂ ಜಯಪ್ರದವಾಗುವುದಿಲ್ಲ, ಅದರಿಂದ ಜನರಿಗೆ ತೃಪ್ತಿಯಾಗುವುದಿಲ್ಲ, ಆದಾಗುವವರೆಗೆ ಜನತಾರಾಜ್ಯವಾಗುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಎಷ್ಟೇ ನಾವು ಹೊಸ ಯೋಜನೆ ಮಾಡಿದರೂ ಸಮಾಜ ಕಲ್ಯಾಣವನ್ನು ನೌಕರರ ಮೂಲಕ ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ.

ಈ ಕಾರಣದಿಂದಲೇ ಎಷ್ಟೋ ವರ್ಷಗಳ ಹಿಂದೆ ಪಂಚಾಯ್ತಿ ರಾಜ್ಯ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು, ಆ ಮೂಲಕ ಅಭಿವೃದ್ಧಿಕಾರ್ಯಗಳನ್ನು ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡು ಅಥವಾ ಪಂಚಾಯ್ತಿಗಳಿಗೆ ವಹಿಸಬೇಕು ಎಂದು ಯೋಚನೆ ಮಾಡಿದ್ದೆವು. ಜನತೆಯ ಮೇಲೆ ವಿಶ್ವಾಸ ಇಡಬೇಕೇ ಹೊರತು ನೌಕರಶಾಹಿಗಳ ಮೇಲೆ ಮೆಚ್ಚಿ ಮಾಡುತ್ತೇವೆ ಎಂದರೆ ಅದು ತಪ್ಪು ಎಂದು ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದ್ದೇನೆ. ಇದೇ ರೀತಿ ಆಗ ಪಂಚಾಯ್ತಿ ರಾಜ್ಯ ಸಚಿವರಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ವ್ಯಾಪಕವಾದ ನಿಜವಾಗಿಯೂ ಜನಸಾಮಾನ್ಯರಿಗೆ ಹೆಚ್ಚಿನ ಅಧಿಕಾರ ಕೊಡುವಂತಹ ಒಂದು ಮಸೂದೆಯನ್ನು ತಯಾರುಮಾಡಿ ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಪಾರ್ಟಿಮುಂದೆ ಬಂದಾಗ ಏನೋ ಕಾರಣದಿಂದ ಅದಕ್ಕೆ ಪಾರ್ಟಿ ಮಂಜೂರಾತಿ ಕೊಡಲಿಲ್ಲ. ಆದರೂ ಈಗಿನ ನಮ್ಮ ಪಂಚಾಯ್ತಿ ರಾಜ್ಯ ಮಂತ್ರಿಗಳು ಆ ಒಂದು ಮಸೂದೆಯಲ್ಲಿನ ಮಹತ್ವವನ್ನು ತಿಳಿದಿರತಕ್ಕವರು, ಅದರ ಪ್ರತಿಪಾದಕರು ಮತ್ತು ಅದರಲ್ಲಿ ವಿಶ್ವಾಸವಿದ್ದವರು, ಎಲ್ಲವನ್ನೂ ಜಿಲ್ಲಾ ಪರಿಷತ್ತಿನ, ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳ ಮೂಲಕ ಮಾಡಬೇಕೆಂಬ ಒಂದು ಶ್ರದ್ಧಾಮನೋಭಾವ ಇದ್ದವರು ಆಗಿದ್ದಾರೆ. ಆದ್ದರಿಂದ ಅವರು ಆದಷ್ಟು ಬೇಗ ಈ ಮಸೂದೆಯನ್ನು ಪರಿಶೀಲನೆಮಾಡಿ ಈ ಅಧಿವೇಶನ ಮುಗಿಯುವದರೊಳಗೇ ತರುತ್ತೇನೆ ಎಂದು ಹೇಳಿದರೆ ಒಳ್ಳೆಯದು. ವಿರೋಧ ಪಕ್ಷದವರು, ಪಕ್ಷದ ಸದಸ್ಯರು, ಪ್ರಮುಖರು ಮತ್ತು ಅದರಲ್ಲಿ ಅನುಭವ ಇದ್ದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅಭಿಪ್ರಾಯವನ್ನು ಗಮನಿಸಿ ಈ ಮಸೂದೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾವ ಯಾವ ಮಸೂದೆಗಳನ್ನು ತರಲಾಗುತ್ತದೆ ಎಂಬ ನಿರ್ದೇಶನ ರಾಜ್ಯಪಾಲರ ಭಾಷಣದಲ್ಲಿ ಬಂದಿದೆ, ಅದರಲ್ಲಿ ಈ ಮಸೂದೆಯನ್ನೂ ಸೇರ್ಪಡೆ ಮಾಡಬೇಕಾಗಿತ್ತು; ಅದು ಆಗಿಲ್ಲ, ಅದಕ್ಕೆ ಏನು ಕಾರಣವೋ ಗೊತ್ತಿಲ್ಲ. ಆದ್ದರಿಂದ ಶ್ರೀಮಾನ್ ನಾಡಗೌಡರು ಇದರಲ್ಲಿ ಆಸಕ್ತಿ ವಹಿಸಿ ಇದನ್ನು ಆದಷ್ಟು ಬೇಗ ಈ ಶಾಸನಸಭೆಯ ಮುಂದೆ ತರುತ್ತಾರೆ ಎಂಬ ಭರವಸೆಯಿಂದ ಇದ್ದೇನೆ. ಈ ಭರವಸೆ ನಿರಾಶೆಯಲ್ಲಿ ಪರಿಣಮಿಸುವುದಿಲ್ಲ ಎಂದು ನಂಬುತ್ತೇನೆ. ಏಕೆಂದರೆ, ಹಿಟ್ಟಿನ ಅಭಿವೃದ್ಧಿಕಾರ್ಯಗಳು ಜನರ ಪ್ರತಿನಿಧಿಗಳ ಉತ್ಸಾಹವಿಲ್ಲದೆ ನಡೆಯುವುದಿಲ್ಲ. ಕೇವಲ ಡೆಪ್ಯೂಟಿ ಕಮೀಷನರು, ತಹಸೀಲ್ದಾರರು, ಅಸಿಸ್ಟೆಂಟ್ ಕಮೀಷನರ ಮೇಲೆ ಅವಲಂಬನೆ ಮಾಡಿದರೆ ಅಭಿವೃದ್ಧಿ ಕಾರ್ಯ ನಡೆಯುವುದಿಲ್ಲ. ನಮ್ಮ ಯೋಜನೆಗಳಿಗೆ ಬಹಳ ಹಣವನ್ನು ವೆಚ್ಚ ಮಾಡಿದ್ದೇವೆ. ಹಳ್ಳಿಗರಿಗೆ, ಕೃಷಿಕರಿಗೆ ಪಂಪ್ ಸೆಟ್ಟುಗಳನ್ನು ಕೊಡುವುದು, ವಿದ್ಯುಚ್ಛಕ್ತಿಯನ್ನು ಒದಗಿಸುವುದು ಈ ಎಲ್ಲಾ ಕಾರ್ಯಗಳಲ್ಲೂ ಕೂಡ ಅವರು ಅದನ್ನು ಪಡೆಯುವ ಹೊತ್ತಿಗೆ ಸಾಕು ಸಾಕಾಗಿಹೋಗುತ್ತದೆ. ಜನತೆ ನಿರೀಕ್ಷಿಸಿದಷ್ಟು ತೃಪ್ತಿಯನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ವಿಷಯದಲ್ಲಿ ಸರ್ಕಾರದವರು ವಿಶೇಷವಾಗಿ ಗಮನ ವಹಿಸಬೇಕು. ಮದ್ರಾಸ್ ರೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಒಬ್ಬ ಸದಸ್ಯರು ಒಂದು ವಿಷಯವನ್ನು ಕೇಳಿದ್ದಾರೆ. ನೀವು ಎರೆಕ್ಟೆಸಿಟಿ ಬೋರ್ಡ್ ಅಂತ ಹೇಳಿ ಯಾವ ರೀತಿ ಒಂದು ಬೋರ್ಡನ್ನು ರಚನೆ ಮಾಡಿದ್ದೀರೋ ಅದೇ ರೀತಿ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಬೋರ್ಡ್‌ನ್ನು ಮಾಡಿ ಈ ಕೆಲಸ ಕಾರ್ಯಗಳನ್ನೆಲ್ಲಾ ಮಾಡಬೇಕೆಂದು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಈಗ ಒಂದು ಸಂಪ್ರದಾಯ ಏನೆಂದರೆ, ಯಾವ ಒಂದು ಬೋರ್ಡನ್ನು ಮಾಡಿದರೂ ಅಲ್ಲಿ ಆಫೀಸರನ್ನು ತುಂಬುವುದು, ಒಬ್ಬ ಆಫೀಸರು ಹತ್ತು ಬೋರ್ಡುಗಳಿಗೆ ಸದಸ್ಯರಾಗಿರಬಹುದು. ಆ ಆಫೀಸರ ಹತ್ತಿರ ಏನಾದರೂ ಮಾತನಾಡುವುದಕ್ಕೆ ಹೋದರೆ ಅವರು ಆಫೀಸಿನಲ್ಲೇ ಇರಲಿಕ್ಕಿಲ್ಲ. ಆ ಮೀಟಿಂಗ್, ಈ ಮೀಟಿಂಗ್ ಅಂತ ಓಡಾಡುತ್ತಾ ಇರುತ್ತಾರೆ. ಈ ರೀತಿ 25 ಬೋರ್ಡುಗಳಲ್ಲಿ ಆ ಆಫೀಸರನ್ನು ಹಾಕಿ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಹೊರಗೇ ತಿರುಗಾಡುತ್ತಾ ಇದ್ದಾರೆ. ಅವರಿಗೆ ಜಪಾನ್‌ಗೋ, ಜರ್ಮನಿಗೋ ತಿರುಗಾಡುವುದರಲ್ಲೇ ಕೆಲಸವಾಗಿದೆ. ಇದು ಒಂದು ಅವರ ವೈಶಿಷ್ಟ್ಯ. ತಜ್ಞರನ್ನು ಅಲ್ಲಿಗೆ ಹಾಕಿ ಅದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಲ್ಲಿ ಎಷ್ಟೋ ಮಂದಿಗೆ ಬಸ್ಸುಗಳನ್ನು ನಡೆಸಿ ಅನುಭವ ಇರತಕ್ಕವರು ಇದ್ದಾರೆ. ಅವರ ಅನುಭವವನ್ನು ಏಕೆ ಪಡೆಯಬಾರದು? ಅದೇ ರೀತಿ ಪ್ರತಿಯೊಂದು ವಿಷಯದಲ್ಲೂ ಆಯಾಯಾ ವಿಷಯದಲ್ಲಿ ತಜ್ಞತೆ ಇರತಕ್ಕ ಜನರನ್ನು ಹಾಕಿ. ಅದನ್ನೇ ಒಂದು ರಾಜಕೀಯ ಚಟುವಟಿಕೆಯಾಗಿ ನಡೆಸಬಾರದು. ಶ್ರೀವಾಸ್ ಶ್ರೀನಿವಾಸ ಶೆಟ್ಟರಿಗೂ ನಮಗೂ ಆ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗ ಪ್ರತಿಯೊಂದರಲ್ಲೂ ರಾಜಕೀಯ ಮನೋಭಾವ ಬೆಳೆದು ನಾನು ಆ ಕಮಿಟಿಯಲ್ಲಿ ಇರಬೇಕು, ಈ ಕಮಿಟಿಯಲ್ಲಿ ಇರಬೇಕು ಎಂಬ ಈ ಒಂದು ಮನೋಭಾವ ಬೆಳೆದು ಬಂದಿದೆ. ಈ ಒಂದು ಹೊಯ್ದಾಟದ ಮನೋಭಾವದ ಬುಡಕ್ಕೆ ಕೊಡಲಿ ಹಾಕಬೇಕು. ಸರ್ಕಾರದ ಯಾವ ಒಂದು ಖಾತೆಯ ಬೋರ್ಡ್ ಆಗಲಿ ಜಯಪ್ರದವಾಗಿ, ಯಶಸ್ವಿಯಾಗಿ ನಡೆಯಬೇಕಾದರೆ ಶಾಸಕರು ಇರಬೇಕು, ಆದರೆ ಶಾಸಕರು ತಜ್ಞರು ಆಗುವುದಿಲ್ಲ—ನಾನೂ

(ಶ್ರೀ ಕೆ. ಕಾಂತಪ್ಪ ಶೆಟ್ಟಿ)

ಒಬ್ಬ ತಜ್ಞ ಎಂಬ ಮನೋಭಾವವನ್ನು ಇಟ್ಟುಕೊಳ್ಳಬಾರದು—ಯಾವ ಒಂದು ಬೋರ್ಡನ್ನೇ ಆಗಲಿ ಸಮಿತಿಯನ್ನೇ ಆಗಲಿ ರಚನೆ ಮಾಡುವುದಾದರೆ—ನಾನು ನೋಡುತ್ತಾ ಇರುವ ಹಾಗೆ ಕೆಲವು ಪ್ರಾಮುಖ್ಯವಾದ ಅಧಿನಿಯಮಗಳನ್ನು ತರುವಾಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಸದಸ್ಯರನ್ನು ಹಾಕುವಾಗ ಒಂದು ರಾಜಕೀಯ ಚಟುವಟಿಕೆ ನಡೆಯುತ್ತದೆ. ಅನುಭವಸ್ಥರು, ಅಭಿಪ್ರಾಯ ಕೊಡುವಂಥವರಿಗೆ ಅದರಲ್ಲಿ ಸ್ಥಾನ ಇರುವುದಿಲ್ಲ. ಅದು ಒಂದು ಪೈಪೋಟಿಯಂತೆ ನಡೆದಿರುತ್ತದೆ. ಆ ರೀತಿ ಮಾಡುವುದರಲ್ಲಿ ದೋಷವುಂಟು. ಪ್ರತಿಯೊಂದು ಕಮಿಟಿಗೂ ನಾವೇ ಆಗಬೇಕು, ನಮ್ಮನ್ನೇ ಹಾಕಬೇಕು, ಹೊರಗಿನವರನ್ನು ಹಾಕಿದರೆ ಟೀಕೆ ಮಾಡುತ್ತೇವೆ. ಈ ಮನೋಭಾವದಲ್ಲಿ ಮಹಾ ದೋಷವುಂಟು. ಆದ್ದರಿಂದ ಈ ವಿಷಯದಲ್ಲಿ ನಿರ್ಭಯವಾಗಿ ನಿರ್ದಾಕ್ಷಿಣ್ಯವಾಗಿ ದಿಟ್ಟಮನಸ್ಸಿನಿಂದ ವಿಷಯವನ್ನು ವಿಮರ್ಶೆಮಾಡಿ ಅಭಿಪ್ರಾಯಗಳನ್ನು ಕೊಡತಕ್ಕ ತಜ್ಞರ ಅನುಭವಗಳನ್ನು ಪಡೆದುಕೊಂಡು ಯಾವ ಒಂದು ಕೆಲಸವನ್ನೇ ಆಗಲಿ ಮಾಡಬೇಕು. ಈಗ ನಮ್ಮ ಕೈಗಾರಿಕೆಗಳನ್ನು ತಗೆದುಕೊಳ್ಳೋಣ. ಪಬ್ಲಿಕ್ ಸೆಕ್ಟರ್‌ನಲ್ಲಿ ಯಾವ ಕೈಗಾರಿಕೆಗಳನ್ನು ನಡೆಸುತ್ತಾರೆ ಅವರು ಒಬ್ಬ ತಜ್ಞರನ್ನು ನೇಮಕ ಮಾಡಿಕೊಂಡರೆ ಅದರ ಒಳ್ಳೆಯದು ಕೆಟ್ಟದ್ದು ಅದೆಲ್ಲದರ ಹೊಣೆಗಾರಿಕೆಯನ್ನೂ ಅವರ ಮೇಲೆ ಹೊರಿಸಿರುತ್ತಾರೆ. ಅದೇ ರೀತಿ ನಮ್ಮ ಕೈಗಾರಿಕೆಗಳಲ್ಲೂ ಇರಬೇಕು. ಅವನು ಹೊಣೆಗಾರನಾಗಿ ಕೆಲವು ವರ್ಷಗಳವರೆಗೂ ಇದ್ದು ಕೆಲಸ ಮಾಡಬೇಕು, ಅವನಿಂದ ಸಾಧ್ಯವಿಲ್ಲ ಎನ್ನುವವರೆಗೂ ಅಲ್ಲದ್ದು ಅತ ಕೆಲಸ ಮಾಡಬೇಕು. ಹಾಗಲ್ಲದೇ 6 ತಿಂಗಳು ಒಂದು ಕಡೆ ಇಟ್ಟಿರುವುದು ಮತ್ತೊಂದು ಆರು ತಿಂಗಳು ಬೇರೆ ಕಡೆಗೆ ವರ್ಗಮಾಡುವುದು ಈ ರೀತಿಯಾದರೆ ಯಾರ ಹೊಣೆಗಾರಿಕೆಯೂ ಇರುವುದಿಲ್ಲ. ಆದ್ದರಿಂದ ನನ್ನ ಅರಿಕೆ ಇಷ್ಟೆ. ಸರ್ಕಾರದ ಪರವಾಗಿ ನಡೆಯುತಕ್ಕ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕವನು ಕೆಲವು ವರ್ಷಗಳವರೆಗೂ ಉತ್ಪಾದನೆಯನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಂಡು ದುಡಿಯುವಂತೆ ಮನೋಭಾವವನ್ನು ಕಲ್ಪನೆ ಮಾಡಬೇಕು. ಅತನನ್ನು ಅಲ್ಲಿಂದಿಲ್ಲಿಗೆ ವರ್ಗಾವಣೆ ಮಾಡಕೂಡದು. ಈ ರೀತಿಯಲ್ಲಿ ಮಾಡಿದರೆ ಮಾತ್ರ ನಮ್ಮ ಕೈಗಾರಿಕೆಗಳಾಗಲಿ ಯಾವುದೇ ಆಗಲಿ ಅಭಿವೃದ್ಧಿಗೆ ಬರಲಕ್ಕೆ ಸಾಧ್ಯ ಇಲ್ಲವೇ ಇದ್ದರೆ ಎಲ್ಲರೂ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುತ್ತಾರೆ ಮತ್ತು ಯಾರನ್ನೂ ಕೂಡ ಹಿಡಿಯಲಕ್ಕೆ ಬರುವುದಿಲ್ಲ. ಈಗ ನಡೆಯುತ್ತಾ ಇರತಕ್ಕ ರೀತಿಯಲ್ಲಿ ಯಾರದು ಯಾವ ಜವಾಬ್ದಾರಿ ಅನ್ನುವಂತಹದನ್ನೇ ಹೇಳಲಕ್ಕೆ ಬರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದ ಆಡಳಿತ ಪದ್ಧತಿಯನ್ನೇ ಸಂಪೂರ್ಣವಾಗಿ ಬದಲಾವಣೆ ಮಾಡಬೇಕಾಗಿದೆ. ಈಗ ಸೆಕ್ರೆಟೇರಿಯಟ್‌ನಲ್ಲಿ ನಡೆಯುವಂತಹ ಎಳೆಂಬ ನೋಡಿ. ಶಾಸಕರು ಹೋದರೆ ಸ್ವಲ್ಪ ಬೆರೆ ಬರುತ್ತದೆ, ಸಾಮಾನ್ಯರು ಹೋದರೆ ಸೆಕ್ರೆಟೇರಿಯಟ್‌ನ ಬಾಗಿಲಿಗೇ ಬಿಡುವುದಿಲ್ಲ, ಇಂಟರ್‌ವ್ಯೂ ಸಿಕ್ಕುವುದು ಕಷ್ಟವಾಗುತ್ತದೆ. ಇಂತಹ ಒಂದು ಪರಿಸ್ಥಿತಿ ಇದೆ. ಯಾವ ಒಬ್ಬ ಜನಸಾಮಾನ್ಯನೇ ಬರಲಿ ಅವನ ಸಂಕಷ್ಟವೇನು ಎಂಬುದನ್ನು ಕೇಳುವಂತಹ ಪರಿಸ್ಥಿತಿ, ಸಹಾಯ ಮಾಡುವಂತಹ ಒಂದು ಮನೋಭಾವ ನೌಕರರಲ್ಲಿ, ಅಧಿಕಾರಿಗಳಲ್ಲಿ ಇರಬೇಕು. ಅಂತಹ ಮನೋಭಾವ ಇರತಕ್ಕವರು ಈ ವಿಧಾನಸೌಧದಲ್ಲಿ ಇರತಕ್ಕವರಲ್ಲಿ ಎಷ್ಟು ಮಂದಿ ಇದ್ದಾರೆ? ನನಗೆ 14 ವರ್ಷದ ಅನುಭವ ಇದೆ. ಯಾವ ಆಫೀಸರನ್ನು ಯಾವ ಉದ್ದೇಶಕ್ಕೆ ಕಾಣಬೇಕು ಎನ್ನುವುದು ನನಗೇ ಗೊತ್ತಾಗುವುದಿಲ್ಲ, ಕೇಳಬೇಕಾಗುತ್ತದೆ. ಇದಕ್ಕೆ ಯಾರನ್ನೇ ಆಗಲಿ ಜವಾಬ್ದಾರರು ಎಂದು ಹೇಳಲಕ್ಕೆ ಬರುವುದಿಲ್ಲ. ಒಂದು ಖಾತೆಗೂ ಇನ್ನೊಂದು ಖಾತೆಗೂ ಕೋಆಪರೇಷನ್ ಇಲ್ಲ. ಏನಾದರೂ ಒಂದು ಆರ್ಡರ್ ಹೊರಟರೆ ಇನ್ನೊಂದು ಖಾತೆಗೆ ಕಮ್ಯೂನಿಕೇಟ್ ಮಾಡಬೇಕು. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡಲು ನಾವೇನು ಮಕ್ಕಳೇ? ಈ ರೀತಿ ಆಡಳಿತ ನಡೆಸಬಾರದು. ಖಾತೆ ಬೆಳೆಯುತ್ತಾ ಹೋದರೆ ಶೇಕಡ 75 ರಷ್ಟು ಹಣ ಅವರ ಸಂಬಳ ಸಾರಿಗೆಗೇ ಆಗುತ್ತದೆ.

11-00 A.M.

ಮತ್ತೊಂದು ಬಹಳ ಬೇಸರವಾದ ವಿಚಾರ ಅಂದರೆ—ನಮ್ಮ ಮಂತ್ರಿಗಳು ಆದಷ್ಟೂ ತಮ್ಮ ಸಂಚಾರಗಳನ್ನು ಕಡಮೆ ಮಾಡಬೇಕು ಅನ್ನುವುದು. ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದರೂ ಒಳ್ಳೆಯದನ್ನು ಹೇಳುವುದಕ್ಕೆ ಹಿಂದೆಗೆಯುವುದಿಲ್ಲ. ಇವರು ಆದಷ್ಟೂ ತಮ್ಮ ಪ್ರವಾಸಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಉದಾಹರಣೆಗೆ ಕೇಳುವುದಾದರೆ, ಮೊನ್ನೆ ಗಂಗಾವಳಿಯಲ್ಲಿ ಒಂದು ನೀತುವೆಯ ಉದ್ಘಾಟನೆ ನಡೆಯಿತು. ಅದಕ್ಕೆ ಬಂದಿದ್ದ ಕಾರುಗಳ ಸಂಖ್ಯೆ ಎಷ್ಟು ಎಂದರೆ 60-ಕಾರುಗಳು ಬಂದಿದ್ದವು. ಅಲ್ಲಿಗೆ ಬಂದಿದ್ದ ಅಧಿಕಾರಿಗಳ ಸಂಖ್ಯೆ

ಎಷ್ಟು? ಆ ಕಾರ್ಯಕ್ಕೆ ಅಷ್ಟು ಅಧಿಕಾರಿಗಳೇಕೆ ಬರಬೇಕು? ಅಲ್ಲಿ ಉದ್ಘಾಟನೆ ಮಾಡಲ್ಪಟ್ಟ ನೇತುವೆ ಎಷ್ಟಾಖಂಡದಲ್ಲೇ ಒಂದು ಹೊಸ ರೀತಿಯ ನೇತುವೆ ಆಗಿರಬಹುದು. ಅಲ್ಲಿಗೆ 60 ಕಾರುಗಳಲ್ಲಿ ಮಂತ್ರಿಗಳು ಬರುವುದೆಂದರೆ ಇಂಥ ವಿಚಾರಗಳು ನಡೆಯುತ್ತಿರುವುದರಿಂದಲೇ ನಮ್ಮ ವಿರೋಧ ಪಕ್ಷದ ಶ್ರೀಮಾನ್ ಶ್ರೀನಿವಾಸ ಶೆಟ್ಟರಂಥ ಸದಸ್ಯರಿಗೆ ಇಲ್ಲಿ ಮಾತನಾಡುವುದಕ್ಕೆ ಬಹಳ ಅನುಕೂಲ ಆಗುತ್ತದೆ. ಅಲ್ಲಿಗೆ ಅದಕ್ಕೆ ಸಂಬಂಧಪಟ್ಟಿರತಕ್ಕ ಅಧಿಕಾರಿಗಳು ಹೋಗಬೇಕಾದ್ದು ನ್ಯಾಯ, ಅವರು ಹೋಗಲಿ. ಅಲ್ಲಿಗೆ ಸಂಬಂಧವಿಲ್ಲದವರು ಬಂದು ಕಾಲಹರಣ ಮಾಡುವುದರಿಂದ ಬಾಕಿಯ ಜನರಿಗೆಷ್ಟು ತೊಂದರೆಯಾಗುತ್ತದೆ? ಆದುದರಿಂದ ಅಂಥ ಕೆಲಸ ಕಾರ್ಯಗಳಲ್ಲಿ ಸರ್ಕಾರದವರ ನೀತಿ ಏನಿರಬೇಕು ಅನ್ನುವ ಬಗ್ಗೆ ಅವರು ಸರಿಯಾದ ಧೋರಣೆಯನ್ನು ವಹಿಸಬೇಕು ಎಂದು ಹೇಳುತ್ತೇನೆ. ಆದರೆ ನಾನು ಹೀಗೆ ಹೇಳುತ್ತಿರುವುದರಿಂದ ಸರ್ಕಾರವನ್ನು ನಾನು ಟೀಕೆ ಮಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ನಾನು ಮಂತ್ರಿಗಳನ್ನು ಟೀಕೆ ಮಾಡುತ್ತಿಲ್ಲ. ಇವರಲ್ಲಿ ಕೇವಲ ಕಾಂಗ್ರೆಸ್ ಪಕ್ಷದ ಸದಸ್ಯರೇ ಎಲ್ಲ ಕೆಲಸ ಕಾರ್ಯಗಳಿಗೂ ಮಂತ್ರಿಗಳನ್ನು ಆಹ್ವಾನ ಮಾಡುತ್ತಾರೆಂದಲ್ಲ. ವಿರೋಧ ಪಕ್ಷಗಳವರೂ ಮಂತ್ರಿಗಳನ್ನು ಆಹ್ವಾನಿಸುತ್ತಾರೆ.

ಶ್ರೀ ಎಂ. ಸಿ. ನರಸಿಂಹನ್.—ನಾನೆಂದೂ ಮಂತ್ರಿಗಳನ್ನು ಬರಬೇಕೆಂದು ಕರೆದಿಲ್ಲ.....

ಶ್ರೀ ಕೆ. ಶಾಂತಪ್ಪಶೆಟ್ಟಿ.—ಮಾನ್ಯ ನರಸಿಂಹನ್ ರವರು ಕರೆಯದಿದ್ದರೆ ಅವರೂ ಬರುವುದಿಲ್ಲ. ಆದರೆ ನಾನು ಹೇಳುತ್ತಿರುವುದು ನೀವೂ ತಪ್ಪನ್ನು ಮಾಡುತ್ತೀರಿ, ನಾವೂ ತಪ್ಪನ್ನು ಮಾಡುತ್ತಿದ್ದೇವೆಂದು ನಾನು ಹೇಳುತ್ತಿದ್ದೇನೆ. ಇದರಿಂದ ಒಟ್ಟಿನಲ್ಲಿ ದೇಶದ ಹಣ ಬಹಳವಾಗಿ ಪೋಲಾಗಿ ಹೋಗುತ್ತದೆ. ಅಲ್ಲಿ ಸೇರತಕ್ಕ ಜನರಾದರೂ ಬಂದ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾರೆಯೇ ಎಂದರೆ ಅದರ ಜೊತೆಯಲ್ಲಿ ಮಂತ್ರಿಗಳಲ್ಲೇ ಕೆಲವರು ತಮ್ಮ ತಮ್ಮಲ್ಲೇ ಒಂದು ಕಾನ್ಫೆರೆನ್ಸ್ ಬೇರೆ ನಡೆಸುತ್ತಾರೆ. ಅದರಲ್ಲಿ ಸ್ಥಳೀಯ ಅಧಿಕಾರಿಗಳೂ ಸೇರುತ್ತಾರೆ. ಹೀಗಾದರೆ ಅಡಳಿತದಲ್ಲಿ ಬಿಗಿ ಇನ್ನೆಲ್ಲಿ ಬರುತ್ತೆ! ಆದುದರಿಂದ ಮಂತ್ರಿಗಳು ಈ ವಿಚಾರವನ್ನು ಕೂಡಲೆ ಕೈಬಿಡಬೇಕೆಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಈ ಮನೋಭಾವನೆ ಕಡಮೆಯಾಗಬೇಕು. ಇದು ಹಿಂದಿನ ಸರ್ಕಾರದ ನಡವಳಿಕೆಯೇ ಇರಲಿ ಹೊಸ ಸರ್ಕಾರದ ನಡವಳಿಕೆಯೇ ಇರಲಿ ಇದನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್.—ತಾವು ಈ ಎಲ್ಲ ಸುಧಾರಣೆಗಳನ್ನೂ, ಅಂದರೆ, ಮಂತ್ರಿಗಳು ಹೀಗೆಲ್ಲ ಟೂರ್ ಹೋಗಬಾರದು ಜನರ ಹಣವನ್ನು ವ್ಯರ್ಥಾ ವ್ಯಯಮಾಡಬಾರದು ಅನ್ನತಕ್ಕ ವಿಚಾರಗಳನ್ನು ನೀವು ಹೇಗೂ ಆಡಳಿತ ಪಕ್ಷದಲ್ಲೇ ಇರುವುದರಿಂದ ನಿಮ್ಮ ಪಕ್ಷದ ಸದಸ್ಯರ ಮೀಟಿಂಗಿನಲ್ಲಿ ಚರ್ಚೆ ಮಾಡಿ ಅಲ್ಲಿ ಇದನ್ನು ತಪ್ಪಿಸುವುದಕ್ಕೆ ಒಂದು ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಆಗುವುದಿಲ್ಲವೇ?

ಶ್ರೀ ಕೆ. ಶಾಂತಪ್ಪಶೆಟ್ಟಿ.—ಅಷ್ಟೇ ಸಾಲದು. ಈ ವಿಚಾರ ಸಾರ್ವಜನಿಕರ ಹಣಕ್ಕೆ ಸಂಬಂಧಪಟ್ಟದ್ದು. ಆದ ದರಿಂದ ನಾವೂ ನೀವೂ ಸೇರಿ ಒಂದು ತೀರ್ಮಾನಕ್ಕೆ ಬರಬೇಕಾದಂಥ ವಿಷಯ ಇದು.

ಇನ್ನು ಅಗ್ರಿಕಲ್ಚರಲ್ ಸೆಮಿನಾರುಗಳನ್ನು ಮಾಡುತ್ತಾರೆ. ಆದರೆ ಆ ವ್ಯವಸಾಯ ಮಾಡಲಕ್ಕೆ ಅಷ್ಟು ಹೆಚ್ಚಿನ ವಿದ್ಯೆಯೇನೂ ಬೇಕಾಗುವುದಿಲ್ಲ. ಅಲ್ಲಿ ಸೇರತಕ್ಕ ಸಾವಿರಾರು ಜನರಲ್ಲಿ ಬಹಳ ಜನರು ವ್ಯವಸಾಯದ ಕಸುಬಿನಲ್ಲಿ ಬಹಳ ಅನುಭವ ಪಡೆದ ರೈತರು ಅಲ್ಲಿಗೆ ಬಂದಿರುವಾಗ ಅಲ್ಲಿ ಆ ಜನರಿಗೆ ಉಳುವುದು ಹೇಗೆ, ಬಿತ್ತನೆ ಮಾಡುವುದು ಹೇಗೆ, ಗೊಬ್ಬರ ಹಾಕುವುದು ಹೇಗೆ ಎಂಬುದನ್ನು ಕೇವಲ ಎಸ್.ಎಸ್.ಎಲ್.ಸಿ. ಪಾಸಾದವರಿಂದ ಪ್ರದರ್ಶನ ಮಾಡಿಸತಕ್ಕ ಅಗತ್ಯವಿಲ್ಲ. ವ್ಯವಸಾಯ ಮಾಡತಕ್ಕ ಜನರಿಗೆ ಸಾಮಾನ್ಯವಾಗಿ ಪ್ರೈಮರಿ ನಾರ್ಮಲ್‌ನಿಂದ ತರಗತಿಗಳವರಿಗೆ ಅಭ್ಯಾಸ ಮಾಡಿದ್ದರೆ ಸಾಕು. ಅಲ್ಲಿ ನೇಗಿಲು ಹಿಡಿಯುವುದರಲ್ಲಿ ಪರಿಣತಿಯನ್ನು ಪಡೆದಿರತಕ್ಕ ಈ ಜನಕ್ಕೆ ಈ ಜನರು ವ್ಯವಸಾಯದಲ್ಲಿ ತಿಳುವಳಿಕೆಯನ್ನು ಕೊಡುತ್ತಾರೆಂದರೆ ಅದು ಜನ ನಗುವಂಥ ವಿಚಾರ. ಒಂದು ಕೆಲಸವನ್ನು ಜನಸಾಮಾನ್ಯರು ಒಂದು ರೀತಿಯಲ್ಲಿ ಮಾಡಿದರೆ ಅದನ್ನು ಸರ್ಕಾರದವರು ಮಾಡತಕ್ಕ ರೀತಿಯೇ ಒಂದು.

ಇನ್ನು ನಮ್ಮ ಸಹಕಾರ ಕ್ಷೇತ್ರದಲ್ಲಿಯೂ ಹೀಗೆಯೇ ಆಗುತ್ತಿದೆ. ಈ ದಿವಸ ಸರ್ಕಾರದವರು ಎಲ್ಲೆಲ್ಲಿ ಒಂದೊಂದು ಹೊಸ ಸಂಸ್ಥೆಗಳನ್ನು ಕಟ್ಟುತ್ತಾರೋ ಅಲ್ಲೆಲ್ಲ ಒಂದು ಟೀಕೆ ಬರಲಕ್ಕೆ ಇದೇ ಕಾರಣ. ಇದನ್ನು ನಾವು ಬಹಳ ಕಠಿಣವಾಗಿ ಖಂಡಿಸಬೇಕು ಮತ್ತು ಬದರಾವಣೆ ಮಾಡಿಕೊಳ್ಳಬೇಕು. ಮುಖ್ಯವಾಗಿ ವ್ಯಾಪಾರಿ ಮನೋಭಾವ ಇರತಕ್ಕ ಜನರು ಹಾಗೂ ಪಟ್ಟಣಗಳಲ್ಲಿ ಹೆಚ್ಚಿಗೆ ವಾಸಮಾಡತಕ್ಕ ಜನರಿಗೂ ಈ ಸಹಕಾರ ಸಂಸ್ಥೆಗಳಲ್ಲಿ ಸೇರುವುದಕ್ಕೆ ಅವಕಾಶ ಕೊಡಬಾರದು. ಈ ಸಂಸ್ಥೆಗಳು ಬಹು ಮಟ್ಟಿಗೆ ಹಳ್ಳಿಯ ಜನರಿಗೆ ಬೇಕಾದವು. ಯಾವುದು ಹಿಂದಿ

(ಶ್ರೀ ಕೆ. ಕಾಂತಪ್ಪ ಶೆಟ್ಟಿ)

ನಿಂದಲೂ ಒಂದು ಸ್ಥಿತಿಯಲ್ಲಿತ್ತೋ ಅದನ್ನು ಅದೇ ಸ್ಥಿತಿಯಲ್ಲಿ ಇರಿಸಬೇಕು ಎನ್ನುವುದು ಕಾಂಗ್ರೆಸ್ ಸಂಸ್ಥೆಯ ಉದ್ದೇಶ. ಅದಕ್ಕಾಗಿ ಈ ಒಂದು ಸಂಸ್ಥೆ ಸ್ಥಾಪನೆಯಾಯಿತು. ಎಲ್ಲವನ್ನೂ ಬದ ಲಾವಣೆ ಮಾಡುವುದಕ್ಕೆ ಹೋಗಬಾರದು. ಯಾವುದನ್ನು ತೀವ್ರಗಾಮಿ ಆಗಿ ಬದಲಾವಣೆ ಮಾಡ ಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ಪರಿಶೀಲನೆ ಮಾಡಬೇಕು. ಅಂಥ ಒಂದು ಪರಿಶೀಲನೆಯನ್ನು ಮಾಡದೆ ಕಾರ್ಯಕ್ಕೆ ಆರಂಭಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಆ ಯೋಜನೆ ಯನ್ನು ಪ್ರಾರಂಭಿಸಿದ ಮಂತ್ರಿಗಳೇ ಆ ಕ್ರಮನೇಮಕ ಕಟ್ಟಳೆಗಳಲ್ಲಿ ಪಾರಾಗುವುದಕ್ಕೆ ದಾರಿ ಗಾಣದೆ ಸಿಕ್ಕಬೀಳುತ್ತಾರೆ ಎಂದು ನನಗೆ ಅನಿಸುತ್ತಿದೆ. ಆದ್ದರಿಂದ ಇದು ಬಹಳ ತೊಂದರೆಗೆ ಕಾರಣವಾಗಿದೆ. ನಮ್ಮಲ್ಲಿ ಒಂದು ರೋಗ ಇದೆ, ಅದೇನೆಂದರೆ, ಇಲ್ಲಿ ಏನಾದರೂ ಸಮಸ್ಯೆ ಬಂದರೆ ಅದಕ್ಕೆ ಒಂದು ಕಮಿಟಿಯನ್ನು ಕೂಡಲೇ ನೇಮಕಮಾಡಿಬಿಡುವುದು. ಅದು ವರ್ಷಾನುಗಟ್ಟಲೆ ವಿಚಾರ ಮಾಡುತ್ತಲೇ ಇರುತ್ತದೆ. ಅಂತಹ ಕಮಿಟಿಗಳನ್ನು ಮಾಡುವುದಕ್ಕೆ ಬದಲಾಗಿ ನಾವೇ ಇದ್ದೇವೆ, ನಮ್ಮ ಅಧಿಕಾರಿಗಳೂ ಸಹ ಬಹಳ ಅನುಭವಸ್ಥರಾಗಿದ್ದಾರೆ, ಅಂತಹವರಲ್ಲಿ ಆ ಸಮಸ್ಯೆ ಗಳ ಬಗ್ಗೆ ಚೆನ್ನಾಗಿ ವಿಚಾರಮಾಡಿ ಆ ಕೆಲಸಗಳನ್ನು ಮಾಡಿಸಬಹುದು. ಆದುದರಿಂದ ನಮ್ಮನೆ ಕಮಿಟಿಗಳನ್ನು ನೇಮಕ ಮಾಡುವುದು ಖಂಡಿತವಾಗಿ ಸರಿಯಲ್ಲ. ಅನೇಕ ವಿಷಯಗಳಲ್ಲಿ ವಿರೋಧ ಪಕ್ಷದ ಸದಸ್ಯರು ಹೇಳುವುದನ್ನು ಒಪ್ಪುತ್ತೇವೆ.

ಶ್ರೀ ಎ. ಶ್ರೀನಿವಾಸ ಶೆಟ್ಟಿ.—ನಮಗೂ ನಿಮಗೂ ಏನೂ ವ್ಯತ್ಯಾಸ ಕಾಣುವುದಿಲ್ಲ. ಎರ್ನಾ ವಿಷಯುಗಳನ್ನೂ ಒಪ್ಪುತ್ತೀರಿ. ಆದರೆ ನೀವು ಒಪ್ಪಿದ್ದನ್ನು ಜಾರಿಗೆ ತರುವುದಿಲ್ಲ.

ಶ್ರೀ ಕೆ. ಕಾಂತಪ್ಪ ಶೆಟ್ಟಿ.—ಅದು ಅಷ್ಟು ಸುಲಭವಲ್ಲ. ಕೆಲವು ಶತಮಾನಗಳಿಂದ ನಡೆದು ಬಂದಂಥ ಒಂದು ಕ್ರಮ, ಒಂದು ಪದ್ಧತಿಯನ್ನು ಸಂಪೂರ್ಣವಾಗಿ ಈಗ ಬದಲಾವಣೆ ಮಾಡಬೇ ಕೆಂದು ಹೇಳಿದರೆ ಅದು ಒಂದು ಕ್ಷಣಮಾತ್ರದಲ್ಲಿ ಆಗುವಂಥಾದ್ದು ಅಲ್ಲ. ಈಗ ಮಾನ್ಯ ಶ್ರೀ ನಿಜ ಲಿಂಗಪ್ಪನವರು ಮತ್ತು ಅವರ ಸಹೋದ್ಯೋಗಿಗಳು ಮಾನ್ಯ ಶ್ರೀ ಶ್ರೀನಿವಾಸ ಶೆಟ್ಟರು ಹೇಳಿದ ಪ್ರಕಾರ ಬಹಳ ಜಾಗ್ರತೆಯಾಗಿ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಇನ್ನೂ ಜಾಗ್ರತೆಯಾಗಿ ಮಾಡಬೇಕೆಂದು ಹೇಳಿದರೆ ಅವರಿಗೆ ಅದನ್ನು ಮಾಡುವುದಕ್ಕೆ ಸ್ವಲ್ಪಮಟ್ಟಿಗೆ ಕಷ್ಟವಾಗಬಹುದು. ಕೆಲವು ವಿರೋಧಪಕ್ಷದವರ ರಾಜ್ಯಭಾರಗಳು ಎಷ್ಟರಮಟ್ಟಿಗೆ ಅವರು ಬೇಡ್ದನ್ನು ಕಾರ್ಯಾಚರಣೆಯಲ್ಲಿ ತಂದಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಕೇರಳದಲ್ಲಿ ಮಾನ್ಯ ಶ್ರೀ ನಂಬೂದ್ರಿಪಾಡ್ ಅವರು ಹಿಂದೆ ಸೈಕಲ್‌ನಲ್ಲಿ ಹೋಗುತ್ತೀವೆ, ನಮಗೆ ಕಾರು ಬೇಡ, ಗುಡಿಸಲೇ ಸಾಕು, ಯಾವ ಅರೋಚುನ್ಸ್‌ಗಳೂ ಬೇಕಿಲ್ಲವೆಂದು ಹೇಳಿದವರು, ಇವತ್ತು ದೊಡ್ಡ ದೊಡ್ಡ ಕಾರುಗಳಲ್ಲಿಯೇ ಅವರು ಹೋಗುತ್ತಿದ್ದಾರೆ; ಈಗ ಅವರ ಅಡಳಿತ ಪದ್ಧತಿಯಲ್ಲಿ ಅಂತಹ ಒಂದು ದೊಡ್ಡ ಕ್ರಾಂತಿಕಾರಕವಾದ ಬದಲಾವಣೆಯಾದುದು ನನಗೆ ಗೊತ್ತಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಆದರೂ ಸರ್ಕಾರಕ್ಕೆ ಕೆಲವು ಖರ್ಚುಗಳನ್ನು ಉಳಿಸಿದ್ದಾರೆ. ಈಗ ಅವರು ಅಡ್ಮಿನಿಸ್ಟ್ರೇಟಿವ್ ರಿಫಾರಮ್ಸ್ ಮಾಡಿದ್ದಾರೆ. ಜನರ ಸಂಪರ್ಕ ಹೊಂದಿದ್ದಾರೆಂದು ನಾನು ಇಲ್ಲಿ ಹೇಳಬೇಕಾಗಿದೆ. ಬೇರೆ ಪಾರ್ಟಿಯವರು ಅವರನ್ನು ಉರುಳಿಸಲು ಪ್ರಯತ್ನ ಮಾಡು ತ್ತಿದ್ದಾರೆ.

ಶ್ರೀ ಕೆ. ಕಾಂತಪ್ಪ ಶೆಟ್ಟಿ.—ಇದು ಒಂದು ಮನೋಭಾವ. ನಾವು ಉರುಳಿಸುವುದು ಎಂದು ಹೇಳಿದರೆ ಏನು ಅರ್ಥ? ರಾಜ್ಯದಲ್ಲಿ ಒಳ್ಳೆಯ ಆಡಳಿತವಿದ್ದರೆ ಅಂತಹ ಒಂದು ಆಡಳಿತದಿಂದ ಜನರು ತೃಪ್ತಿಪಟ್ಟಿದ್ದರೆ ಅಂತಹ ರಾಜ್ಯವಾಡಳಿತವನ್ನು ಬೇರೆ ಪಕ್ಷದವರು ಅಥವಾ ಕಾಂಗ್ರೆಸ್‌ನವರು ಉರು ಳಿಸುತ್ತಾರೆಂದು ಹೇಳಿದರೆ ಹೇಗೆ! ನೀವು ಆ ಕೆಲಸಕ್ಕೆ ಹೋಗಿ ಎಂದು ನಮಗೆ ಹೇಳಿದರೂ ನಾವು ಯಾರೂ ಹೋಗುವುದಿಲ್ಲ. ನೀವು ಆ ಪದವಿಗೆ ಅನರ್ಹರು, ಅಯೋಗ್ಯರು, ಆ ಪದವಿಯಿಂದ ಇಳಿದು ಬನ್ನಿ ಎಂದು ನಮ್ಮನೆ ಹೇಳಿದರೆ ಹೇಗೆ? ಜನಾನುರಾಗಿಗಳಾಗಿದ್ದರೆ ಇನ್ನೊಮ್ಮೆ ಎಲ್ಲದ್ದರೂ ಬರುತ್ತೇವೆ. ಇನ್ನೊಂದು ಚುನಾವಣೆಯಲ್ಲಿ ನಿಲ್ಲುತ್ತೇವೆ. ಕಮ್ಯೂನಿಸ್ಟ್ ಮುಖ್ಯಮಂತ್ರಿಯೇ ಇರಲಿ, ಪಿ.ಎಸ್.ಪಿ., ಎಸ್.ಎಸ್.ಪಿ. ಅಥವಾ ಜನಸಂಘದ ಮುಖ್ಯಮಂತ್ರಿಯೇ ಇರಲಿ ಕಾಂಗ್ರೆಸ್ ನವರು ಉರುಳಿಸಬೇಕು ಎಂದು ಹೇಳಿದರೆ ಹೇಗೆ? ಅವರಿಗೆ ಜನ ಬೆಂಬಲವಿದೆ, ಶಾಸನಕ ಬೆಂಬಲ ವಿದೆ, ಅವರು ಯಾವ ಕ್ರಾಂತಿಕಾರಕವಾದ ಬದಲಾವಣೆಯನ್ನಾದರೂ ಮಾಡಬಹುದು ಎಂಬು ದಾಗಿ ತಮ್ಮ ಹೇಳಿಕೆಗಳನ್ನು ಕೊಡುತ್ತಾ ಕಾಂಗ್ರೆಸ್‌ನವರು ಉರುಳಿಸುವುದಕ್ಕೆ ಪ್ರಯತ್ನ ಮಾಡು

ತ್ತಿದ್ದಾರೆಂದು ಘೋಷಣೆ ಮಾಡುತ್ತಿರುವುದು ನನಗೆ ಅರ್ಥವಾಗುವುದಿಲ್ಲ. ಇಂತಹ ವಿಚಾರಗಳನ್ನು ಅನೇಕ ಸಾರಿ ವಿಚಾರವಾದಿಗಳಾದ ಮಾನ್ಯ ಶ್ರೀ ಶ್ರೀನಿವಾಸ ಶೆಟ್ಟರು ಮತ್ತು ಮಾನ್ಯ ಶ್ರೀ ನರಸಿಂಹನ್ ಅವರು ಹೇಳುವುದನ್ನು ನೋಡಿದರೆ ನನಗೆ ಅದು ವಿಪರೀತವಾಗಿ ಕಾಣುತ್ತದೆ.

Sri M. C. NARASIMHAN.—The Kerala Government was dismissed by an Act of the Congress party leader Mr. Nehru. They said that there is breakdown of law and order and dismissed the Kerala Ministry.

ಶ್ರೀ ಕೆ. ಕಾಂತಪ್ಪ ಶೆಟ್ಟಿ. — ಇಡೀ ಕೇರಳಾದಲ್ಲಿ ಶ್ರೀ ಇ.ಎಂ.ಎಸ್. ನಂಬೂದ್ರಿಪಾಡ್ ಅವರಿಗೆ ರಕ್ಷಣೆ ಕೊಟ್ಟವರು ಪ್ರಧಾನಮಂತ್ರಿಯಾಗಿದ್ದಂಥ ನೆಹರೂ ಅವರು. ಇಡೀ ಕೇರಳಾದಲ್ಲಿ ಒಂದು ಆಂಥೋಳನವಾಯಿತು. ಆಗ ಕೇವಲ ಪಕ್ಷದ ಸಂಘಟನೆಯನ್ನು ಬಲಪಡಿಸುವುದಕ್ಕೆ ಸರ್ಕಾರ ಹಣವನ್ನು ಹೆಚ್ಚು ಹೆಚ್ಚಿಗೆ ಖರ್ಚು ಮಾಡಿದರು. ಆದ್ದರಿಂದ ಅಂತಹ ಕ್ರಾಂತಿಕಾರಕವಾದ ಆಂಥೋಳನ ಆಯಿತು. ಪ್ರಜಾವಾದಿಗಳು ಕಮ್ಯೂನಿಸ್ಟ್ ಸರ್ಕಾರಕ್ಕೆ ಸಹಾಯ ಮಾಡುತ್ತಿದ್ದರು. ಅವರು ಪ್ರೊ-ಕಮ್ಯೂನಿಸ್ಟ್‌ರಾಗಿದ್ದರು ಎಂದು ಹೇಳಿದವರೂ ಇದ್ದಾರೆ. ಇದು ಬಹಳ ಶೋಚನೀಯ. ಆ ಒಂದು ಮನೋವ್ಯತ್ತಿ ಹೇಗಾದರೂ ಇರಲಿ. ಅದನ್ನು ಅಲ್ಲಿಗೇ ಬಿಡೋಣ. ನಾನು ಈ ಸಂದರ್ಭದಲ್ಲಿ ಪ್ರತಿಯೊಂದು ವಿಷಯದ ಮೇಲೆ ಮಾತನಾಡಲಕ್ಕೆ ಹೋಗುವುದಿಲ್ಲ.

ವಿದ್ಯೆಯ ವಿಷಯದಲ್ಲಿ ಹೇಳಬೇಕಾದರೆ ನಾವು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಪ್ರಚಾರವನ್ನು ಜಾಸ್ತಿಯಾಗಿ ಮಾಡದೆ ಬರೀ ಪಟ್ಟಣಗಳಲ್ಲಿಯೇ ಬಹಳವಾಗಿ ವಿದ್ಯಾಪ್ರಚಾರ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಸರ್ವೇ ಸಾಧಾರಣವಾಗಿ ವಿರೋಧ ಪಕ್ಷದವರು ಹೇಳುವುದು ಇದ್ದೇ ಇದೆ. ನ್ಯೂಲು ಆಗಬೇಕು, ಕಂಪಲ್ಸರಿಯಾಗಿ ಪ್ರಾಥಮಿಕ ವಿದ್ಯಾಬ್ಯಾಸ ಆಗಬೇಕು, ಹೈನ್ಯೂಲು ಆಗಬೇಕು ಎಂಬುದಾಗಿ ವಿರೋಧ ಪಕ್ಷದವರು ಹೇಳುವುದು ಯಾವಾಗಲೂ ಇದ್ದೇ ಇದೆ. ಈಗಿನ ಇದೇ ಶಿಕ್ಷಣ ಪದ್ಧತಿಯನ್ನು ನಾವು ಅನುಸರಿಸುತ್ತಾ ಹೋದರೆ ಶಿಕ್ಷಿತ ಜನರ ನಿರುದ್ಯೋಗ ಭಯಂಕರ ಸಮಸ್ಯೆಗಳನ್ನು ಮುಂದೆ ಎದುರಿಸಬೇಕಾಗುತ್ತದೆ. ಆ ಒಂದು ಪರಿಸ್ಥಿತಿ ಖಂಡಿತವಾಗಿ ಬರುತ್ತದೆ. ಎಲ್ಲರೂ ಪಾಲಿಟೆಕ್ನಿಕ್‌ನಲ್ಲಿ ಶಿಕ್ಷಣ ಪಡೆಯಬೇಕು. ಎಲ್ಲರೂ ಡಾಕ್ಟರ್ಸ್ ಆಗಬೇಕೆಂದೇನೂ ಇಲ್ಲ. ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಅಕ್ಷರದ ಜ್ಞಾನ ಬೇಕು. ಆಮೇಲೆ ಉದ್ಯೋಗ ಶಿಕ್ಷಣವಾಗಬೇಕು. ಯಾರೇ ಆಗಲಿ, ಬಡವರೇ ಇರಲಿ, ಶ್ರೀಮಂತರಾದವರೇ ಇರಲಿ, ಎಸ್. ಎಸ್. ಎಲ್. ಸಿ ವರೆಗೆ ನೀವು ವಿದ್ಯೆ ಕೊಟ್ಟರೆ ಸಾಕು. ಆಮೇಲೆ ಟೆಕ್ನಿಕಲ್ ಎಜುಕೇಶನ್ ಪಡೆಯಬಹುದು. ಒಳ್ಳೆಯ ವಿದ್ಯಾರ್ಥಿಗಳನ್ನು ಅದರಲ್ಲಿಯೂ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇರುವವರನ್ನು ಸೆಲೆಕ್ಟ್ ಮಾಡಿ ಅವರಿಗೆ ಹೈಯರ್ ಎಜುಕೇಶನ್ ಎಷ್ಟು ಅಗತ್ಯವೋ ಅಷ್ಟು ಮಾತ್ರ ಕೊಡಬೇಕು. ಇದನ್ನು ಸಾರ್ವತ್ರಿಕವಾಗಿ ಎಲ್ಲಾ ಕಡೆಯೂ ಆಚರಣೆಗೆ ತರಬೇಕು. ಎಲ್ಲರೂ ಬಂದು ನಮ್ಮನ್ನು ಕೇಳುವವರಾಗಿದ್ದಾರೆ. ಏನಾದರೂ ಮಾಡಿ ನೀಟು ಕೊಡಿಸಿ ಎಂದು. ಅವನಿಗೆ ಆದರಲ್ಲಿ ಅಭಿರುಚಿ ಇದೆಯೋ ಇಲ್ಲವೋ ಎಂದು ಆಲೋಚನೆ ಮಾಡುವುದಿಲ್ಲ. ನಮ್ಮ ದೇಶದೊಳಗೆ ಡಿಗ್ರಿಗಳನ್ನು ಬೇಕಾದಷ್ಟು ಜನ ಪಡೆದಿದ್ದಾರೆ. ಈ ಡಿಗ್ರಿಗಳ ವ್ಯಾಮುಖ್ಯತೆ ಬಹಳ ಹಿಂದಿನ ಕಾಲದಲ್ಲಿತ್ತು. ಈಗ ಆ ಡಿಗ್ರಿಗಳನ್ನು ಯಾರೂ ಕೇಳುವುದಿಲ್ಲ. ಒಂದು ಫ್ಯಾಕ್ಟರಿಯಲ್ಲಿ ಪ್ರೊಬೇಷನರಿಯಾಗಿ ಕೆಲಸ ಮಾಡಬೇಕಾದರೆ, ಸರ್ಟಿಫೀಕೇಟ್ ಕೇಳುತ್ತಾರೆಯೇ ವಿನಾ, ಡಿಗ್ರಿ ಕೇಳುವುದಿಲ್ಲ. ಆದ್ದರಿಂದ ವಿದ್ಯೆ ಎಷ್ಟು ಬೇಕೊ ಅಷ್ಟು ಕೊಟ್ಟರೆ ಸಾಕು.

Sri J. B. MALLARADHYA.—What he says is correct. My son passed Mechanical Engineering in the Mysore University and he went to Germany for training and there he was taken as an ordinary worker. He worked there for two months as a Cooly. They did not recognise his degree.

ಶ್ರೀ ಕೆ. ಕಾಂತಪ್ಪ ಶೆಟ್ಟಿ. —ಇನ್ನು ಈ ರೀತಿ ನಾವು ಕೃತಕವಾದಂತಹ ವಿದ್ಯೆಯನ್ನು ಕೊಟ್ಟು ವಿದ್ಯಾರ್ಥಿಗಳಲ್ಲಿ ಹೆಚ್ಚಿಗೆ ಶಿಕ್ಷಣ ಇಲ್ಲದ ಹಾಗಾಗಿದೆ. 1920ನೇ ಇಸವಿಯಲ್ಲಿ ನಾನು ಐದನೆಯ ಫಾರಂನಲ್ಲಿ ಪಾಸ್ ಮಾಡಿದವ. ನನ್ನ ಅನುಭವವನ್ನು ಹೇಳಬೇಕಾದರೆ, ನನ್ನ ಮಗ ಬಿ. ಎ. ಎಲ್ ಎಲ್. ಬಿ. ಪಾಸ್ ಮಾಡಿದರೂ ಅವನು ನನಗೆ ಸರಿಯಾದ ಇಂಗ್ಲಿಷ್‌ನಲ್ಲಿ ಕಾಗದ ಬರೆಯುವುದೇ ಅವನಿಗೆ ಗೊತ್ತಿಲ್ಲ. ಇಂಗ್ಲಿಷ್‌ನಲ್ಲಾಗಲೀ ಅಥವಾ ಕನ್ನಡದಲ್ಲಾಗಲೀ ಬರೆಯಲು ಸ್ವಂತ ಅನುಭವ ಬೇಕು. ಅವನು ಅಷ್ಟು ಓದಿದ್ದರೂ ಅವನಿಗೆ ಸರಿಯಾಗಿ ಕಾಗದ ಬರೆಯುವುದಕ್ಕೆ ಬರಲಿಲ್ಲ. ಅವನು ಬರೆದ ಕಾಗದದಲ್ಲಿ ವ್ಯಾಕರಣ ಇಲ್ಲ, ತಪ್ಪಿದೆ ಎಂದು ಹೇಳಿದಾಗ ಅವನು ನಮ್ಮನ್ನೆ ನಗುತ್ತಾನೆ.

ಉಪಸಭಾಪತಿಯವರು.—ಮಾನ್ಯ ಸದಸ್ಯರು ಅವರ ಮಗನ ತಪ್ಪನ್ನು ಅವರೇ ಎತ್ತಿ ತೋರಿಸುತ್ತಿದ್ದಾರೆ.

ಶ್ರೀ ಕೆ. ಕಾಂತಪ್ಪ ಶೆಟ್ಟಿ.—ಈ ರೀತಿ ಆಗುತ್ತದೆ. ಆದ್ದರಿಂದ ಈಗ ಕ್ವಾಲಿಟಿ ಕೆಟ್ಟಿದೆ. ಸರ್ವೇಸಾಮಾನ್ಯವಾಗಿ ಜ್ಞಾನ ಪಡೆಯಲು ಮನುಷ್ಯನಾದವನು ವಿದ್ಯಾಭ್ಯಾಸ ಮಾಡಲಿ. ಆದರೆ Quantity is not at all important, quality is important. Crores of rupees are wasted on this higher education.

ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಿಗಳಾದ ಶ್ರೀ ಸೇನ್ ಅವರು ಬಹಳ ಕ್ರಾಂತಿಕಾರಕ ಬದಲಾವಣೆ ಕಾರ್ಯಕ್ರಮವನ್ನು ಆಗಬೇಕು ಎಂದು ಹೇಳುತ್ತಿದ್ದಾರೆ. ಆ ಘೋಷಣೆಗೆ ತಳಹದಿಯನ್ನು ಹಾಕಿದವರು ಮಹಾತ್ಮ ಗಾಂಧೀಜಿಯವರು. ಬೇಸಿಕ್ ಎಜುಕೇಷನ್ ತಯಾರು ಮಾಡಿದ್ದಾರೆ. ಆದರೆ ಅದನ್ನು ಪ್ರಯೋಗ ಮಾಡಿಲ್ಲ. ಅದನ್ನ ಮೂಲೆಗೆ ಒತ್ತಿದ್ದಾರೆ. ಭಾಷೆಯ ವಿಷಯದಲ್ಲಿ ಈಗಾಗಲೇ ರಾಷ್ಟ್ರಭಾಷೆ ಹಿಂದಿ, ಹಿಂದೂಸ್ಥಾನಿ ಎಂದು ತಯಾರು ಮಾಡಿದ್ದಾರೆ. ಇದನ್ನು ಇಂಗ್ಲಿಷಿನ ವ್ಯಾಮೋಹದಿಂದ ಮೂಲೆಗೆ ಒತ್ತಿದ್ದಾರೆ. ಇಂಗ್ಲಿಷಿನ ವ್ಯಾಮೋಹವನ್ನು ಹುಟ್ಟಿಸುವುದಕ್ಕೆ ನಾವೇ ಕಾರಣ. ನಮ್ಮಲ್ಲಿ ಇಂಗ್ಲಿಷಿನ ವ್ಯಾಮೋಹ ಹೋಗಿಲ್ಲ. ಆದ್ದರಿಂದ ಇಂಗ್ಲೀಷು ಬೇಕು ಎಂದು ಹೇಳುವುದರಲ್ಲಿ ಆಶ್ಚರ್ಯವಿಲ್ಲ. ಎಲ್ಲಾ ಕಡೆಗಳಲ್ಲೂ ಎಂ. ಪಿ. ಎಲ್. ಶಾಸ್ತ್ರಿಗಳಂಥ ಕನ್ನಡ ಮತ್ತು ಸಂಸ್ಕೃತ ಪಂಡಿತರು ಇದ್ದರೂ ಕೂಡ ಇಂಗ್ಲಿಷಿನಲ್ಲಿ ಮಾತನಾಡುವಂತಹ ವ್ಯಾಮೋಹ ಹೋಗಿಲ್ಲ, ಅದೊಂದು ಹಿರಿಮೆ ಎಂಬ ಭಾವನೆ ಹೋಗಿಲ್ಲ, ಮನೋಭಾವ ಹೋಗಿಲ್ಲ ಇಂಗ್ಲಿಷಿನವರು ಹೋದರೂ ಅವರ ಪ್ರೇತ ನಮ್ಮನ್ನು ಕಾಡುತ್ತಿದೆ. ಇಂಗ್ಲೀಷೇ ಪ್ರಾಧಾನ್ಯ ಎನ್ನುವ ಮನೋಭಾವ ಇರುತ್ತದೆ. ಒಂದು ಸಾರಿ ಉಡುಪಿಯ ಸ್ವಾಮಿಗಳು ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಶುರು ಮಾಡಿದರು. ಅರ್ಧಮರ್ಧ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಾರೆ. ಅವರಿಗೂ ಇಂಗ್ಲೀಷಿನ ವ್ಯಾಮೋಹ ಇದೆ. ಧರ್ಮ ಸಂಸ್ಕೃತಿಯನ್ನು ಬಹಳವಾಗಿ ಪ್ರಚಾರಮಾಡುವವರು ಮಾತನಾಡುವುದು ಇಂಗ್ಲೀಷು. ಅದಕ್ಕೆ ನಾನು ಹೇಳಿದೆ, ಸ್ವಾಮೀಜಿ ಏತಕ್ಕೆ ಇಂಗ್ಲೀಷು ಮಾತನಾಡುತ್ತೀರಿ, ತಮಗೆ ಕನ್ನಡ ಮತ್ತು ತುಳು ಚೆನ್ನಾಗಿ ಬರುತ್ತದೆ, ಏತಕ್ಕೆ ಆ ಭಾಷೆಯಲ್ಲಿ ಮಾತನಾಡಬಾರದು ಎಂದು ನಾನು ಹೇಳಿದೆ. ಆಮೇಲೆ ಅವರು ತುಳುವಲ್ಲಿ ಮಾತನಾಡಿದರು. ಈ ರೀತಿಯ ದಾಸ್ಯ ಮನೋಭಾವ ಬ್ರಿಟಿಷರ ಕೈಕೆಳಗೆ ಇತ್ತು. ಅದೇ ಮನೋಭಾವ ಈಗಲೂ ಕೆಲವರಲ್ಲಿ ಹಬ್ಬಿದೆ. ಈಗ ಶ್ರೀಮಾನ್ ಮಲ್ಲಾರಾಧ್ಯರು ಇಂಗ್ಲೀಷು ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಈಗ ಅವರೂ ಕೂಡ ಕನ್ನಡದಲ್ಲಿಯೇ ಮಾತನಾಡುತ್ತಾರೆ. ಬಹಳ ಸಂತೋಷ. ಅವರು ಹಳೆಯ ಅಭಿನರು. ಆದ್ದರಿಂದ ಅವರಿಗೆ ಸ್ವಲ್ಪ ಕಾಲಾವಕಾಶವನ್ನು ಕೊಡಬೇಕು. ಇದೇ ರೀತಿಯಿಲ್ಲ ಕಾಂಗ್ರೆಸ್ಸಿನಲ್ಲಿ ಇದ್ದವರು ಕೆಲವರು ರಾಷ್ಟ್ರಪತಿಯಿಂದ ರಾಷ್ಟ್ರಭಾಷೆ ಹಿಂದಿ ಆಗಬೇಕು ಎಂದು ಪ್ರಚಾರ ಮಾಡಿಕೊಂಡು ಬಂದು ಅದಕ್ಕೆ ಬೇಕಾದ ಏರ್ಪಾಟು ಮಾಡಿದ್ದಾರೆ. ಆದರೂ ಸಹ ಕೆಲವರು ಇಂಗ್ಲೀಷಿನ ವ್ಯಾಮೋಹವನ್ನು ಬಿಟ್ಟಿಲ್ಲ. ಆದ್ದರಿಂದ ಈ ವಿಷಯದಲ್ಲಿ ಭಾಷಾ ಸಮಸ್ಯೆಯನ್ನು ಎತ್ತಿದರೆ ಹಿರಿಮೆಯಿಂದ ರಾಷ್ಟ್ರಭಾಷೆಯು ಯಾವುದು ಇರಬೇಕೆಂಬುದನ್ನು ಮಹಾತ್ಮ ಗಾಂಧಿಯವರು ತೀರ್ಮಾನ ಮಾಡಿ ಬ್ಲೂಪಿಂಟ್ ಮಾಡಿ ಹೋಗಿದ್ದಾರೆ. ಅದನ್ನು ಮಾಡಿಲ್ಲದಿದ್ದರೆ, ಆಗ ನಾವು ಇದನ್ನು ಯೋಚನೆ ಮಾಡಬೇಕಾಗಿತ್ತು. ಈಗಾಗಲೇ ರಾಂಗ್ವೇಜ್ ಪ್ರಾಬ್ಲಮ್ ಆಗಿದೆ. ಮದ್ರಾಸಿನಲ್ಲಿ ಕೇವಲ ಹಿಂದಿ ವಿರೋಧದ ನೆಪದಿಂದ ತಮಿಳಿಗೆ ಪ್ರಾಧಾನ್ಯ ಕೊಡುತ್ತಾ ಬಂದಿದ್ದಾರೆ. ಆ ಇಡೀ ಜಿಲ್ಲುವಳಿ ಪ್ರತ್ಯೇಕವಾದ ರಾಷ್ಟ್ರವನ್ನು ಕಟ್ಟುವಂಥಾದ್ದು ಎನ್ನುವವರೆಗೆ ಹೋಗಿದೆ. ಈ ವಿಚ್ಛಿದ್ರಕಾರಕ ಶಕ್ತಿಗಳನ್ನು ಕೆಲವರು ಪ್ರಶಂಸೆ ಮಾಡುವುದಕ್ಕೆ, ಅವರನ್ನು ತೃಪ್ತಿಪಡಿಸುವುದಕ್ಕೆ ಹೋಗುತ್ತಿದ್ದಾರೆ. ಹೀಗಾದರೆ ರಾಷ್ಟ್ರಭಾಷೆ ರಾಷ್ಟ್ರ ಮನೋಭಾವನೆಯನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಗ್ಲೀಷು ಬೇಕು ಎಂದು ಹೇಳುವವರಲ್ಲಿ ಆತ್ಮೋನ್ನತಿ ಇದೆ. ಈಗ ಯಾವುದೇ ದೇಶವನ್ನು ತೆಗೆದುಕೊಳ್ಳಿ, ಜರ್ಮನಿ, ಜಪಾನ್, ರಷ್ಯಾ ಎಲ್ಲರೂ ಕೂಡ ಅವರವರ ಭಾಷೆಯಲ್ಲೇ ಮಾತನಾಡುತ್ತಾರೆ. ನಮ್ಮ ರಾಯಭಾರಿ ರಷ್ಯಾದಲ್ಲಿ ಹೋಗಿ ಇಂಗ್ಲಿಷಿನಲ್ಲಿ ಭಾಷಣ ಮಾಡುವಾಗ ಅಲ್ಲಿಯವರು ಭಾಷಣಕಾರರನ್ನು ನಿಮ್ಮ ಭಾಷೆಯಲ್ಲಿ ಭಾಷಣ ಮಾಡುವುದಕ್ಕೆ ಬರುವುದಿಲ್ಲವೇ ಎಂದು ಕೇಳಿದರಂತೆ. ನಿಜವಾಗಿಯೂ ಇದು ನಮಗೆ ನಾಚಿಕೆಗೇಡಿನ ಪ್ರಸಂಗ. ಅನಂತರ ನಮ್ಮ ರಾಯಭಾರಿಯು ಇಂಗ್ಲೀಷಿನಲ್ಲಿ ಭಾಷಣ ಮಾಡಿದ್ದನ್ನು ಹಿಂದೂಸ್ಥಾನಿಯಲ್ಲಿ ತರಜಮೆಯಾದ ರಷ್ಯಾ ರಾಯಭಾರಿಯಿಂದ ಭಾಷಾಂತರ ಮಾಡಿಸಿ ಓದಿಸಿದರಂತೆ. ಇದೇ ರೀತಿಯಲ್ಲಿ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಯಾವುದೇ ದೇಶದವರಾಗಲೀ ತಮ್ಮ ತಮ್ಮ ರೀತಿ ನೀತಿ ವೇಷ ಭೂಷಣಗಳಿಗೆ ಪ್ರಾಧಾನ್ಯತೆ ಕೊಡುತ್ತಾರೆಯೇ ಹೊರತು ಬೇರೆಯವರನ್ನು ಅನುಕರಣ ಮಾಡುವುದಿಲ್ಲ. ಅವರನ್ನು ಅನುಕರಣ ಮಾಡಿದರೆ ಪ್ರಾಧಾನ್ಯತೆ ಬರುತ್ತದೆ ಎಂದರೆ ಅದು ಶುದ್ಧತಪ್ಪು.

ದೇಶದ ಅಡಳಿತ ನೀತಿಯನ್ನು ರೂಪಿಸುವಂತಹ ಪಂಚಾಯತಿ ರಾಜ್ಯದ ಮನೋಧೆಯನ್ನು ಮೂಲೆಗೆ ಒತ್ತಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ವಿದ್ಯಾಕ್ಷೇತ್ರದಲ್ಲಿ ಕೂಡ ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ವಿಚಾರ ಮಾಡಬೇಕಾಗುತ್ತದೆ. ಶಿಕ್ಷಣ ಪದ್ಧತಿಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡದಿದ್ದರೆ ನಮ್ಮ ದೇಶ ಗಂಭೀರವಾದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಇನ್ನೊಂದು ವಿಷಯ ಏನೆಂದರೆ, ಈಗ ನಾವು ಅನೇಕ ಯೋಜನೆಗಳನ್ನು ಮಾಡಿದ್ದೇವೆ. ಕೋಟಿ ಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ವಿರೋಧ ಪಕ್ಷದವರು ಹೇಳಿದರು, ಜನಜೀವನ ಮಟ್ಟ ಏರಿದೆ, ಜನರಲ್ಲಿ ಜಾಗೃತಿ ಉಂಟಾಗಿದೆ. ಹಳ್ಳಿ ಹಳ್ಳಿಗಳಲ್ಲಿ ನಾವು ಹೋದಾಗ ಅದು ಆಗಬೇಕು, ಇದು ಆಗಬೇಕು, ಎಂದು ಜನ ಕೇಳುತ್ತಿದ್ದಾರೆ ಎಂದು. ಅವರಲ್ಲಿ ಜಾಗೃತಿ ಉಂಟಾಗಿದೆ, ಅದಕ್ಕಾಗಿ ಅವರು ಕೇಳುತ್ತಿದ್ದಾರೆ. ಈಗ ಅನೇಕ ಕೆಲಸಗಳಾಗಿವೆ. ಇನ್ನೂ ಕೆಲವು ಕೆಲಸಗಳು ಆಗಬೇಕಾಗಿದೆ. ಏನೂ ಆಗಿಲ್ಲ, ಏನೂ ಮಾಡಿಲ್ಲ, ಎಂದು ನುಳ್ಳು ಫೋಷಣೆ ಮಾಡತಕ್ಕದ್ದು ವಿರೋಧಪಕ್ಷದವರ ಜವಾಬ್ದಾರಿಯುತವಾದ ಕೆಲಸವಲ್ಲ. ಆದದ್ದನ್ನು ಒಪ್ಪಬೇಕು. ಒಳ್ಳೆಯದನ್ನು ಮಾಡಿದ್ದರೆ ಒಳ್ಳೆಯದನ್ನು ಮಾಡಿದ್ದಾರೆಂದು ಹೇಳಬೇಕು. ಕೆಟ್ಟದ್ದು ಮಾಡಿದ್ದರೆ ಅದು ಕೆಟ್ಟದ್ದು ಆಗಿದೆ ಅದನ್ನು ಸರಿಪಡಿಸಬೇಕೆಂದು ಹೇಳಬೇಕು. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕೆಲಸ ಮಾಡುವುದನ್ನು ನಾವು ಒಪ್ಪಬಹುದು. ಆದರೆ ಪ್ರತಿಯೊಂದು ವಿಷಯದಲ್ಲಿಯೂ ಆ ರೀತಿ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಈಗ ಉದಾಹರಣೆಗೆ ಹೇಳಬೇಕಾದರೆ, ಮಧುಗಿರಿ ಪ್ರಕರಣದಲ್ಲಿ ಪೋಲೀಸಿನವರ ಅತ್ಯಾಚಾರವೇ ಅಲ್ಲ, ಬೇರೆಯವರ ವಿಷಯವೂ ಇದೆ. ಅದರಲ್ಲಿ ಜನತೆಯ ಅತ್ಯಾಚಾರವೂ ಇದೆ. ಜನತೆಯ ಅತ್ಯಾಚಾರ ಆದದ್ದನ್ನು ವಿರೋಧ ಪಕ್ಷದವರು ಕಡೆಗಾಣಿಸಿ ಪೋಲೀಸಿನವರು ಮಾಡಿದ ತಪ್ಪನ್ನು ಭೂತ ಕನ್ನಡಿಯಲ್ಲಿಟ್ಟು ನೋಡಿದರು. ಈಗ ಕೆಲವು ದಿವಸಗಳ ಹಿಂದೆ ವಿದ್ಯಾರ್ಥಿಗಳು ಹಿಂದಿ ಚಳುವಳಿಯನ್ನು ಆರಂಭ ಮಾಡಿದರು. ವಿದ್ಯಾರ್ಥಿಗಳು ಕಲ್ಲು ಹೊಡೆದರು. ಅದರಲ್ಲಿ ಕೆಲವು ರೌಡಿಗಳು ಸೇರಿಕೊಂಡಿದ್ದರು ಎಂದು ಹೇಳಿದರು. ಅಂತೂ ಆ ಚಳುವಳಿಯನ್ನು ಆರಂಭ ಮಾಡಿದವರು ವಿದ್ಯಾರ್ಥಿಗಳು. ಈಗ ಸೆಂಟ್ರಲ್ ಕಾಲೇಜಿನಲ್ಲಿ ಕಲ್ಲುಗಳನ್ನು ಸಂಗ್ರಹ ಮಾಡಿದ್ದರು. ಆಮೇಲೆ ಕಲ್ಲು ಹೊಡೆಯುವುದಕ್ಕೆ ಪ್ರಾರಂಭವಾದಾಗ, ಅವರು ಲಾ-ಅಂಡ್ ಆರ್ಡರ್ ಮುರಿಯುವುದಕ್ಕೆ ಹೋದಾಗ ಪೋಲೀಸಿನವರು ಅದನ್ನು ತಪ್ಪಿಸುವುದಕ್ಕೆ ಹೋದರು. ಅದಕಾರಣ ಪೋಲೀಸಿನವರು ಅತ್ಯಾಚಾರ ಮಾಡಿದರು ಎಂದರೆ ಪೋಲೀಸಿನವರು ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದರಲ್ಲೂ ಒಂದು ದೊಡ್ಡ ಬಣ್ಣ ಕಟ್ಟಿ ಪ್ರತಿಯೊಂದು ಮಾಡಿದ್ದು ತಪ್ಪು ಎಂದರೆ ಬಹಳ ಕಷ್ಟ ಆದೀತು. ತೂಕ ಬುದ್ಧಿಯಿಂದ, ಸಮತೋಲನ ಬುದ್ಧಿಯಿಂದ ವಿಮರ್ಶೆ ಮಾಡಿ ಅಭಿಪ್ರಾಯ ಕೊಡಬೇಕು. ಮಾಡಿದ್ದೆಲ್ಲಾ ತಪ್ಪು ಎನ್ನುವ ಮನೋಭಾವನೆ ಸರಿಯಲ್ಲ, ಯೋಗ್ಯವಲ್ಲ ಎಂದು ನನ್ನ ಅಭಿಪ್ರಾಯ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ, ಈಗ ಸರ್ಕಾರದವರು ಭಾರಿ ಭಾರಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯನಾಗಿ ನನ್ನ ಅನುಭವಕ್ಕೆ ಬಂದ ವಿಷಯ ಎಂದರೆ ನೀರಾವರಿ ಯೋಜನೆಗಳನ್ನು ಕಟ್ಟಿಸಲಿಕ್ಕೆ ಅಲ್ಲಲ್ಲಿಗೇ ಬೇಡಿಕೆಗಳು ಬರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ, ಬಿಜಾಪುರದಲ್ಲಿ ಕೊಡಗಿನಲ್ಲಿ ಎಲ್ಲಾ ಕಡೆಗಳಲ್ಲಿಯೂ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕು, ಸೇತುವೆಗಳನ್ನು ತೆಗೆದುಕೊಳ್ಳಬೇಕು, ಎಂದು ಜನತೆ ಕೇಳುತ್ತಿದ್ದಾರೆ. ನೀರಾವರಿ ಯೋಜನೆಯಾಗಲೀ, ಸೇತುವೆಯಾಗಲೀ ಕೈಗಾರಿಕೆಯಾಗಲೀ ಇಂತಿಷ್ಟು ಸಮಯದಲ್ಲಿ ನಾವು ಅವುಗಳನ್ನು ಮುಗಿಸುತ್ತೇವೆ ಎನ್ನುವ ಭರವಸೆ ಇಲ್ಲದೆ, ಅನುಭವ ಇಲ್ಲದೆ, ಗುರಿಯಿಲ್ಲದೆ ನಾವು ಹಣವನ್ನು ಹಾಕುವಂಥಾದ್ದು ಬಹಳ ಹೆಚ್ಚಿನ ಖರ್ಚಿಗೆ ಕಾರಣವಾಗುತ್ತದೆ. ಅಲ್ಲಲ್ಲೇ ಹಣವನ್ನು ಸ್ವಲ್ಪ ವ್ಯಯ ಮಾಡುತ್ತಾ ಬರುವುದು ಪ್ರತಿವರ್ಷವೂ ಮುಂದುವರಿದರೆ ಕೇಳಿದ 10 ರಷ್ಟು ವೆಚ್ಚ ಹೆಚ್ಚುತ್ತದೆ. ಎಷ್ಟೋ ಜನ ಕಂಟ್ರಾಕ್ಟರು ವಿಳಂಬ ಮಾಡಿ ಹೆಚ್ಚಿನ ಹಣ ಕೇಳಲಿಕ್ಕೆ ಹತ್ತಿದ್ದಾರೆ.

11-30 A.M.

ಇದರಿಂದ 50 ಪರ್‌ಸೆಂಟ್ 75 ಪರ್‌ಸೆಂಟ್ ಹೆಚ್ಚು ಹಣ ಕೊಡಬೇಕೆಂದು ಕಂಟ್ರಾಕ್ಟರ್‌ಗಳು ಕೇಳುತ್ತಿದ್ದಾರೆ. ಈ ಕಾರಣದಿಂದ ಕೋಟಿಗಟ್ಟಲೆ ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ನಿಶ್ಚಿತ ಅವಧಿಯೊಳಗೆ ಯೋಜನೆಯನ್ನು ಪೂರೈಸುವುದಾದರೆ ಮಾತ್ರ ಯೋಜನೆಗಳನ್ನು ಕೈಕೊಳ್ಳಬೇಕು. ಯಾವ ಒಂದು ಗುರಿಯನ್ನೂ ಇಟ್ಟುಕೊಳ್ಳದೆ ಯೋಜನೆಗಳನ್ನು ಪ್ರಾರಂಭಮಾಡಿ 10 ವರ್ಷಗಳಾದರೂ ಮುಗಿಯದಿದ್ದರೆ ಆ ಯೋಜನೆಗಳಿಗೆ ವೆಚ್ಚ ಬಹಳ ಅಧಿಕವಾಗುತ್ತದೆ. ಕೇಂದ್ರ ಸರ್ಕಾರದವರು ಕೊಡತಕ್ಕಂಥ ಸಹಾಯದ ಜೊತೆಗೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿ

(ಶ್ರೀ ಕೆ. ಕಾಂತಪ್ಪ ಶೆಟ್ಟಿ)

ಕೊಂಡು ಯೋಜನೆಗಳನ್ನು ಪ್ರಾರಂಭ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಕೇಂದ್ರ ಸರ್ಕಾರದವರು ನೇಮಕಮಾಡಿರತಕ್ಕಂಥ ಪ್ಲಾನಿಂಗ್ ಕಮಿಷನ್ ಅವರು ಇಡೀ ಇಂಡಿಯಾ ದೇಶಕ್ಕೆ ಅನ್ವಯಿಸುವಂತೆ ಒಂದು ಪ್ಯಾಟ್ರನ್ ತಯಾರುಮಾಡುತ್ತಾರೆ. ಅವರು ತಯಾರುಮಾಡತಕ್ಕಂಥ ಪ್ಯಾಟ್ರನ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ, ಉತ್ತರ ಕನ್ನಡ ಜಿಲ್ಲೆಗೆ ಸರಿಹೊಂದುವುದಿಲ್ಲ. ಈ ಪ್ಲಾನಿಂಗ್ ಕಮಿಷನ್ ಅವರು ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಪ್ಯಾಟ್ರನ್ ತಯಾರುಮಾಡುತ್ತಾರೆ. ಈ ಪ್ಲಾನಿಂಗ್ ಕಮಿಷನ್ ಅಧಿಕಾರಿಗಳು ಸುಮ್ಮನೆ ಟೂರ್ ಮಾಡಿ ಸರ್ಕಾರದ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುತ್ತಿದ್ದಾರೆಯೇ ಏನಾ ಯಾವ ಯೋಜನೆಗಳೂ ಸಹ ಕಾಲಕ್ಕೆ ಸರಿಯಾಗಿ ಮುಗಿಯುತ್ತಿಲ್ಲ. ಅಲ್ಲದೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕೊಡತಕ್ಕಂಥ ಗ್ರಾಂಟ್ ಕೂಡ ದುರುಪಯೋಗವಾಗುತ್ತಿದೆಯೆಂದು ಹೇಳಬಹುದು. ಯಾವ ಯಾವ ಯೋಜನೆಗಳನ್ನು ಇಂತಿಷ್ಟೇ ಅವಧಿಯೊಳಗೆ ಮುಗಿಸುವುದಕ್ಕೆ ಸಾಧ್ಯವಿದೆಯೋ ಅಂತಹವುಗಳನ್ನು ಮಾತ್ರ ತೆಗೆದು ಕೊಳ್ಳಬೇಕೇ ಹೊರತು, ಎಲ್ಲಾ ಕಡೆಗಳಲ್ಲೂ ಯೋಜನೆಗಳನ್ನು ಪ್ರಾರಂಭಮಾಡಿ ಯಾವುದನ್ನೂ ಸರಿಯಾಗಿ ಮುಗಿಸದಿದ್ದರೆ ಬಹಳವಾಗಿ ಹಣ ವ್ಯರ್ಥವಾಗುತ್ತದೆ. 16 ಆಣೆ ಖರ್ಚು ಮಾಡುವಾಗ 12 ಆಣೆಯಷ್ಟಾದರೂ ಜನರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಮಾತ್ರ ತೆಗೆದು ಕೊಂಡು ಜಾಗ್ರತೆ ಮುಗಿಸಬೇಕು. ಇಷ್ಟು ಹೇಳಿ 1968-69ನೆಯ ವರ್ಷದ ಆಯವ್ಯಯ ಪತ್ರವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ನರಸಿಂಹನ್.—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಕಾಂತಪ್ಪ ಶೆಟ್ಟರು ಮಾತನಾಡಿದ ಅನೇಕ ವಿಷಯಗಳನ್ನು ನಾನು ಒಪ್ಪುತ್ತೇನೆ. ಕೆಲವು ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅವರಂತೆ ನಾವುಗಳೇನಾದರೂ ಸರ್ಕಾರಕ್ಕೆ ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟರೆ ಅದು ಸರ್ಕಾರಕ್ಕೆ ರುಚಿಕರವಾಗಿರುವುದಿಲ್ಲ. ಹಿಂದೆ ಅನೇಕ ಸಲ ನಾನು ಸರ್ಕಾರಕ್ಕೆ ನಾನಾ ರೀತಿಯ ಸಲಹೆಗಳನ್ನು ಕೊಟ್ಟಾಗ್ಯೂ ಕೂಡ ಸರ್ಕಾರದವರು ಆ ತಪ್ಪುಗಳನ್ನು ಇದುವರೆಗೆ ತಿದ್ದಿಕೊಂಡಿಲ್ಲ. ನಾವು ಕೊಟ್ಟಂತಹ ಸಲಹೆಗಳಿಗೆ ಸರ್ಕಾರದಿಂದ ಉತ್ತರವೇ ಬರುವುದಿಲ್ಲ. ಆದ್ದರಿಂದ ಈ ದಿನ ನಾನು ಸರ್ಕಾರಕ್ಕೆ ರಚನಾತ್ಮಕವಾದಂಥ ಸಲಹೆಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ರಚನಾತ್ಮಕವಾದಂಥ ಸಲಹೆಗಳನ್ನು ಹೇಳದಿದ್ದರೂ ಈ ಸಾಲಿನ ಆಯವ್ಯಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. 1968-69ನೆಯ ವರ್ಷದ ಆಯವ್ಯಯ ಪತ್ರದ ಬಗ್ಗೆ ಮಾತನಾಡುತ್ತಾ ಅನೇಕ ಮಾನ್ಯ ಸದಸ್ಯರುಗಳು ಮಾನ್ಯ ಆರ್ಥಿಕ ಮಂತ್ರಿಗಳು ವಾಸ್ತವಿಕವಾದಂಥ ಚಿತ್ರವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಮತ್ತು ಎವರದಾದಂಥ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಂದು ಸಹ ಹೇಳಿದ್ದಾರೆ. ಮುಂದಕ್ಕೆ ಪರಿಸ್ಥಿತಿ ಸುಧಾರಿಸುತ್ತದೆ ಎನ್ನತಕ್ಕಂಥ ಆಶಾದಾಯಕವಾದ ಚಿತ್ರವನ್ನು ಹಣಕಾಸಿನ ಸಚಿವರು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇವರು ಹೇಳಿರುವುದು ಸರಿಯೆಂದು ಮಾನ್ಯ ಸದಸ್ಯರುಗಳನೇಕರು ಒಪ್ಪಿಕೊಂಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಈ ರಾಜ್ಯದಲ್ಲಿ ಆದ ಪ್ರಗತಿಯ ಬಗ್ಗೆ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆದಂಥ ಪ್ರಗತಿಯ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ: The past has been black—The future is bleak ಎನ್ನುವಂತೆ ಹಿಂದಿನದ್ದು ಆಶಾದಾಯಕವಾಗಿಲ್ಲ, ಮುಂದಿನದ್ದು ಸಹ ಆಶಾದಾಯಕವಾಗಿಲ್ಲವೆಂದು ಹೇಳುತ್ತೇನೆ. ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಹೇಳುತ್ತೇನೆ. ಮೂರನೆಯ ಯೋಜನೆಯ ಪ್ರಾರಂಭದಲ್ಲಿ ಸರ್ಕಾರದವರು ಮುಂದೆ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆಂದು ಹೇಳಿದ್ದರು. ಈ ಯೋಜನೆಗಳನ್ನು ಮುಗಿಸಲಿಕ್ಕೆ ಜನರು ಎಷ್ಟೇ ಕಷ್ಟವಾದರೂ ಸಹ ತೆರಿಗೆಯನ್ನು ಕೊಡಬೇಕೆಂದು ಸರ್ಕಾರದವರು ಹೇಳಿದರು. ಮೂರನೆಯ ಯೋಜನೆ ಮುಗಿದ ಮೇಲೆ ಜನರಿಂದ ಎಷ್ಟು ತೆರಿಗೆ ಬರಬಹುದೆಂದು ಸರ್ಕಾರದವರು ನಿರೀಕ್ಷೆ ಮಾಡಿಕೊಂಡಿದ್ದರೋ ಅದಕ್ಕಿಂತ ಹೆಚ್ಚು ತೆರಿಗೆಯನ್ನು ಜನರು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿ 2,870 ಕೋಟಿ ರೂಪಾಯಿಗಳು ಜನರಿಂದ ತೆರಿಗೆ ಬರಬಹುದೆಂದು ಅಂದಾಜು ಮಾಡಿದ್ದರು. ಆದರೆ ಅದಕ್ಕಿಂತ ಹೆಚ್ಚು ತೆರಿಗೆಯನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ವಸೂಲು ಮಾಡಿದ್ದಾರೆ. ಅಸ್ತಿ ಪಾಸ್ತಿಗಳ ಮೇಲೆ 300 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ವಸೂಲು ಮಾಡಿದ್ದರೆ, ಅಪ್ರತ್ಯಕ್ಷವಾಗಿ ಶೇಕಡ 80ರಷ್ಟು ತೆರಿಗೆ

ಯನ್ನು ವಸೂಲು ಮಾಡಿದ್ದಾರೆ.—ಅಂದರೆ ವಸೂಲು ಮಾಡಬೇಕೆಂದು ಅಂದಾಜು ಮಾಡಿಕೊಂಡಿದ್ದಕ್ಕೂ ಹೆಚ್ಚಾಗಿ ವಸೂಲು ಮಾಡಿದ್ದಾರೆ. ಭವ್ಯ ಭಾರತವನ್ನೇ ನಿರ್ಮಾಣ ಮಾಡುತ್ತೇವೆಂದು ಜನರಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಮತ್ತೆ ಸರ್ಕಾರದವರೇ ಹೇಳುತ್ತಾರೆ : ತೆರಿಗೆ ಕೊಡುವುದಕ್ಕೂ ಬೆಲೆಗಳ ಏರಿಕೆಗೂ ಏನೂ ಒಂದಕ್ಕೊಂದು ಸಂಬಂಧವಿಲ್ಲವೆಂದು. ಬಡ ಜನರಿಂದ ಬರತಕ್ಕಂಥ ತೆರಿಗೆ ಹಣ ಏನಿವೆ ಅದು ಶ್ರೀಮಂತರಿಗಾಗಿ ಖರ್ಚಾಗುತ್ತಿದೆ. ಆಹಾರಧಾನ್ಯಗಳ ಬೆಲೆಯನ್ನು ಹೆಚ್ಚು ಮಾಡಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಜನಸಾಮಾನ್ಯರಿಂದ ಹಣವನ್ನು ಸುಲಿಗೆ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಬೇರೇ ಪ್ರಾಂತ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿ ನೋಡುವುದಾದರೆ ನಮ್ಮ ರಾಜ್ಯದಲ್ಲಿ ನಿರುದ್ಯೋಗತನ ಜಾಸ್ತಿಯಾಗಿದೆ, ಕೂಲಿ ಕಡಿಮೆ ಸಿಗುತ್ತಿದೆ ಮತ್ತು ಬೆಲೆಗಳು ಜಾಸ್ತಿಯಾಗಿವೆ. ಈ ರೀತಿಯಿಂದ ಸಾಮಾನ್ಯ ಜನರಿಗೆ ನಮ್ಮ ರಾಜ್ಯದಲ್ಲಿ ಬಹಳ ತೊಂದರೆಯಾಗುತ್ತಿದೆ. ಕಳೆದ ವರ್ಷ ನಮ್ಮ ಸರ್ಕಾರದವರು 60.25 ಕೋಟಿ ರೂಪಾಯಿಗಳನ್ನು ಯೋಜನೆಗಳಿಗಾಗಿ ಖರ್ಚುಮಾಡಬೇಕೆಂದು ಹೇಳಿದ್ದರು. 1968-69ನೇ ಸಾಲಿಗೂ ಸಹ 60.25 ಕೋಟಿ ರೂಪಾಯಿಗಳನ್ನೇ ಯೋಜನೆಗಳಿಗಾಗಿ ಖರ್ಚುಮಾಡುತ್ತೇವೆಂದು ಹೇಳುತ್ತಿದ್ದಾರೆ. ಅಂದರೆ ಇದರ ಅರ್ಥವೇನು ? ನಾವು ಬಹಳ ಕಡಿಮೆ ಖರ್ಚು ಮಾಡುತ್ತಿದ್ದೇವೆಂದು ಅರ್ಥವಾಗುತ್ತದೆ. ಒಂದು ಕಡೆ ಬೆಲೆಗಳು ಜಾಸ್ತಿಯಾಗುತ್ತಿದ್ದರೆ ಮತ್ತೊಂದು ಕಡೆ ಯೋಜನೆಗಳಿಗಾಗಿ ಖರ್ಚುಮಾಡತಕ್ಕಂಥದ್ದು ಕಡಿಮೆಯಾಗುತ್ತಿದೆ. ಕಳೆದ ಹತ್ತಾರು ವರ್ಷಗಳಿಂದ ಈ ಸರ್ಕಾರದವರು ನೀಡಿರುವ ಅಂಕ ಅಂಶಗಳನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಎಲ್ಲರಿಗೂ ಅನುಕೂಲವಾಗುವಂಥ ಪರಿಸ್ಥಿತಿಯನ್ನು ನಿರ್ಮಿಸಿದ್ದೇವೆಂದು ಸರ್ಕಾರದವರು ಎದೆಗಾರಿಕೆಯಿಂದ ಮಾತನಾಡುವುದು ಸರಿಯಿಲ್ಲ. ನಿಮ್ಮ ನಿರೀಕ್ಷೆಯಂತೆ ಯಾವುದೂ ಆಗಿಲ್ಲ. ನೀವು ಇಟ್ಟುಕೊಂಡಿದ್ದ ಗುರಿ ಸಾಧನೆಯಾಗಿಲ್ಲವೆಂದು ಹೇಳಬಹುದು. ಜೀವನ ವೆಚ್ಚ ದಿನೇ ದಿನೇ ಜಾಸ್ತಿಯಾಗುತ್ತದೆ. ಈಗ ಒಂದು ಅಂಕ ಅಂಶವನ್ನು ನಾನು ಹೇಳುತ್ತೇನೆ. ಈಗ ಕೇಂದ್ರ ಸರ್ಕಾರದವರು ಅಂದಾಜು ಮಾಡಿದ ಪ್ರಕಾರ ಐದು ಪರಸೆಂಟ್ ನ್ಯಾಷನಲ್ ಇನಕಂ ಅವರೇಜ್ ಹೆಚ್ಚಾಗಬೇಕೆಂದು ಇದೆ. ಆದರೆ, ನ್ಯಾಷನಲ್ ಇನಕಂ ಬಹಳ ನಿಧಾನವಾಗಿ ಜಾಸ್ತಿ ಆಗುತ್ತಾ ಇದೆ. ಈಗ 2.8 ಪರ್ ಕ್ಯಾಪಿಟಾ ಇನಕಂ ಬಹಳ ನಿಧಾನ ಪ್ಲಾನ್ ಸಮಯದಲ್ಲಿ 0.3 ಮಾತ್ರ ಜಾಸ್ತಿಯಾಗಿದೆ. ಅದು ಐದು ಇರಬೇಕಾಗಿತ್ತು. ಅದರ ಆಧಾರದ ಮೇಲೆ ತೆರಿಗೆ ವಸೂಲು ಮಾಡಿಕೊಂಡಿದ್ದೀರಿ. ಆದರೆ ಜನರಿಗೆ ಕೊಟ್ಟಿರತಕ್ಕದು 0.3 ಪರೆಸೆಂಟ್. ಅರ್ಧ ಕೂಡ ಇಲ್ಲ. ಆದ್ದರಿಂದ ಕಳೆದ ಐದು ವರ್ಷಗಳಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಸರಿಯಾದುದಲ್ಲ. ಮಾನವ ದೃಷ್ಟಿಯಿಂದ ನೋಡಬೇಕು. ಈ ಸುಳ್ಳನ್ನು ಮುಂದಕ್ಕಾದರೂ ಬಿಟ್ಟುಬಿಡಿ. ಒಂದು ದೊಡ್ಡ ರಾಷ್ಟ್ರವನ್ನು ಕಟ್ಟುತ್ತೇವೆಂದು ಹೇಳಿದರೆ, ಯಾರಿಗೆ ತಾನೇ ನಂಬಿಕೆ ಬರುತ್ತದೆ ? ಏಕೆ ಈ ಸುಳ್ಳು ಮಾತು ?

ಇನ್ನೊಂದು ವಿಷಯ ನೋಡೋಣ. 'ಫೈನಾನ್ಸಿಯಲ್ ರಿಸರ್ವ್'. ನಿಜವಾಗಿಯೂ ಸೌಜನ್ಯ ವಿಲ್ಲದಿದ್ದ ಮೇಲೆ ಇವರು ಏನು ಪ್ಲಾನ್ ಮಾಡುತ್ತಾರೆ ? ಪ್ಲಾನ್ ಇದೆಯೋ, ಪಾಲಸಿ ಇದೆಯೋ, ಏನಾದರೂ ಗುರಿ ಸಾಧಿಸಲಿಕ್ಕೆ ಸಾಧ್ಯವಿದ್ದರೆ, ಅದಕ್ಕೆ ತಕ್ಕ ಅಡ್ಮಿನಿಸ್ಟ್ರೇಟಿವ್ ಮೆಶೀನರಿ ರೂಪಿನತಕ್ಕ ಯೋಗ್ಯತೆ ಇರಬೇಕು, ರಾಷ್ಟ್ರಿಕತನ ಇರಬೇಕು, ಒಂದು ಮುಖಂಡತ್ವ ಇರಬೇಕು. ಅದೆರಡೂ ಇಲ್ಲದಿದ್ದರೆ ಏನು ಮಾಡುವುದಕ್ಕೆ ಸಾಧ್ಯ? ಜನತೆ ಹೇಗೆ ನಂಬಬೇಕು ? ಆದ್ದರಿಂದ ವಿರೋಧ ಪಕ್ಷದವರು ಟೀಕೆ ಮಾಡುತ್ತಾರೆ, ಇದನ್ನು ಅಧಿ ರರಪತಿ ಶಾಷ್ಮವೆಂದು ತಿಳಿದುಕೊಳ್ಳಬಾರದು. ಇವತ್ತು ಸರ್ಪ್ಲಸ್ ಬಜೆಟ್ ಕೊಟ್ಟುಬಿಟ್ಟರು ಎಂದು ಅನೇಕ ಮಾನ್ಯ ಸದಸ್ಯರು ತೃಪ್ತಿ ಪಟ್ಟುಕೊಂಡರು. ಇದು ಕಣ್ಣಿಗೆ ಮಣ್ಣೆರಚುವಂತಹದು. 11.9 ಕೋಟಿ ರೂಪಾಯಿವರೆಗೆ ಸರ್ಪ್ಲಸ್ ಇದೆ ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದರ ವೇಸ್ ಅಂಡ್ ಮೀನ್ಸ್ ಭಾಗ ನೋಡೋಣ. ಆರಂಭದಲ್ಲಿ ಓಪನಿಂಗ್ ಬ್ಯಾಲೆನ್ಸ್ ಮೈನಸ್ 12.79 ಕೋಟಿ. ಅಂದರೆ 12 ಮುಕ್ಕಾಲು ಕೋಟಿ ಯಷ್ಟು ಕೊರತೆ ಇದೆ. ಅದನ್ನು ಸರಿದೂಗಿಸಲಿಕ್ಕೆ 11 ತೋರಿಸಿದ್ದಾರೆ. ಕೊನೆಯಲ್ಲಿ ಬ್ಯಾಲೆನ್ಸ್ ಎಷ್ಟು ಇದೆ ಎಂದರೆ, ಎಕ್ಸ್‌ಟ್ರಾರ್ಡಿನರಿ 25 ಕೋಟಿ. 26 ಕೋಟಿಯ ಕೊರತೆ ಬೀಳುತ್ತದೆ. ಆದ್ದರಿಂದ ಇದನ್ನು ಏಕೆ ಸರ್ಪ್ಲಸ್ ತೋರಿಸಬೇಕಾಗಿತ್ತು ? ಕಳೆದ ವರ್ಷ ಏನಿತ್ತು ? ಮಾನ್ಯ ಸದಸ್ಯರು ಹೋದ ವರ್ಷದ್ದು ನೋಡಬಹುದು. 12 ಕೋಟಿ ಕೊರತೆ ಇತ್ತು. ಡಿ. ಎ. ಮತ್ತು ಅನೀಕ್ಷಿತವಾದಂತಹ ಮುಂದಿನ ಸಾಲಿನ ವಿಶೇಷವಾದಂತಹ ಖರ್ಚು, ಅದರಿಂದಾಗಿ ಈ ರೀತಿ ಯಾಯ್ತು ಎಂದು ಹೇಳುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸರ್ಪ್ಲಸ್ ಬಂದಿರುವುದು ವಾಸ್ತವವಾಂಶ ಅಲ್ಲವೆಂದು ತಮ್ಮ ಅಭಿಪ್ರಾಯವೇ !

ಶ್ರೀ ಎಂ. ಸಿ. ನರಸಿಂಹನ್.—ಇದರಲ್ಲಿ ರಿಯಾಲಿಟಿ ಏನೂ ಇಲ್ಲ. ನಮ್ಮ ಕಂದಾಯ ಕೂಡ ಜಾಸ್ತಿಯಾಗುತ್ತಿದೆ; ಶೇಕಡಾ 12 ಜಾಸ್ತಿಯಾಗುತ್ತ ಇದೆ. 176 ಕೋಟಿ ಇದ್ದದ್ದು 194ಕ್ಕೆ ಹೆಚ್ಚಾಗಿದೆ. You are providing a stable plan in a period of rising revenue, that is in otherwords not even a *status quo* is being maintained. ನನಗೆ Alice in wonderland ಎಂಬ ಒಂದು ಕತೆ ನೆನಪಿಗೆ ಬರುತ್ತದೆ. ಒಂದು ಮಗು ಭೂಗರ್ಭದಲ್ಲಿ ಹೋದಾಗ ಒಬ್ಬನನ್ನು ನೋಡುತ್ತಿತ್ತಂತೆ. ಅವನು ವೇಗವಾಗಿ ಓಡುತ್ತಿದ್ದನಂತೆ. ಆದರೆ ಅವನು ಓಡುತ್ತಿರುವುದಲ್ಲದೆ, ಒಂದು ಅಂಗುಲ ಕೂಡ ಮುಂದಕ್ಕೆ ಹೋಗುತ್ತಿರಲಿಲ್ಲವಂತೆ. ಅದೇ ರೀತಿ ನಮ್ಮ ಸರ್ಕಾರದವರು ಕೂಡ. ರೆವೆನ್ಯೂ ಜಾಸ್ತಿಯಾಗಿದೆ, ದಕ್ಷತೆ ಹೆಚ್ಚಾಗುತ್ತಿದೆ, ಇಂಡಸ್ಟ್ರೀಸ್ ಕಮಿಶನರ್, ಕಾನ್ಸ್ ಆಕೌಂಟೆಂಟ್ಸ್, ಪಬ್ಲಿಕ್ ರೆವೆನ್ಯೂ ಜಾಸ್ತಿ ಮಾಡುತ್ತೇವೆ ಏನು ಅಸಾಧ್ಯ ಗಳಿನುತ್ತೇವೆಂದು ಹೇಳುತ್ತಿದ್ದಾರೆ. ಅಡ್ಮಿನಿಸ್ಟ್ರೇಟೀವ್ ಎಫಿಷಿಯನ್ಸಿ ಜಾಸ್ತಿಯಾಗುವ ಸ್ಪಷ್ಟವನ್ನು ಕಾಣುತ್ತಿದ್ದಾರೆ. For development expenditure that is made, is fast declining. I will give some figures. ನಮ್ಮನೆ ರೆವೆನ್ಯೂ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡಿದ್ದೇವೆ, ಖರ್ಚು ಮಾಡಿದ್ದೇವೆ ಎಂದು ಹೇಳುವುದಲ್ಲದೆ, ಆರ್ಥಿಕ ಅಭಿವೃದ್ಧಿಯಾಗುವುದಿಲ್ಲ. ಎರಡನೇ ವ್ಯಾನಿನಲ್ಲಿ 21 ಪರ್‌ಸೆಂಟ್ ರೇಟ್ ಆಫ್ ಗ್ರೋತ್ ಇದೆ. 67—68, 68—69 ಅದು ಸಾಧಾರಣ 10 ಪರ್‌ಸೆಂಟ್ ಡಿಕ್ಲೈನಿಂಗ್. ಸ್ಥಿರ ಆಸ್ತಿಗಳನ್ನು ನೋಡಿದರೆ, ಇರಿಗೇಶನ್ ಪ್ರೊಜೆಕ್ಟ್ ಅದೂ ಇಲ್ಲ. ಇವರು ಸ್ಥಿರ ಆಸ್ತಿಯನ್ನು ಉಂಟುಮಾಡುತ್ತಾರೆ ಎನ್ನುವುದು ತಾನೇ ವಾದ. ಆ ವಾದಕ್ಕೂ ಆಧಾರವಿಲ್ಲ.

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ (ಪದವೀಧರರ ಕ್ಷೇತ್ರ).—ಈ ಅನೆಕ್ಷರ್ (*b*) ಯಲ್ಲಿ ಜನತೆಗೆ, ವಿದ್ಯಾಭ್ಯಾಸ, ವ್ಯವಸಾಯ, ಅನಿಮರ್ ಹಸ್ಬೆಂಡರಿ ಮೊದಲಾದುವುಗಳಿಗೆ ಕೊಟ್ಟಿದ್ದಾರೆ. ಜನರಿಗೆ ಏನು ಬೇಕು ಅದಕ್ಕೆ ಹೆಚ್ಚು ಹೆಚ್ಚು ಹಣವನ್ನು ಕಾಣಿಸಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಸ್ಥಿರ ಆಸ್ತಿ ಎಲ್ಲಿದೆ, ಇರಿಗೇಷನ್ ಪ್ರೊಜೆಕ್ಟ್ ಎಲ್ಲಾ! ಕೇಂದ್ರ ಸರ್ಕಾರದಿಂದ ಓಪನ್ ಮಾರ್ಕೆಟ್ಟಿಂದ ಲೋನ್ಸ್ ತೆಗೆದುಕೊಂಡು ಬರುತ್ತಿದ್ದಾರೆ. ಅವಕ್ಕೆ ಇಂಟರೆಸ್ಟ್ ಚಾರ್ಜಸ್ ಅಥವಾ ಮೈಂಟೆನೆನ್ಸ್ ಕವರ್ ಆಗಬೇಕೋ, ಬೇಡವೊ? ಅದು ಬೇಡ ಎಂದರೆ ಇದು ಔಟ್‌ರೈಟ್ ಗ್ರಾಂಟ್ ಎಂದು ಮಾಡಬೇಕಾಗುತ್ತದೆ. There is no justification for the debt at all. ಹೌದು, ನಿಜ. ಯಾವ ಪ್ರಮಾಣದಲ್ಲಿ ಖರ್ಚು ಮಾಡುತ್ತಿದ್ದಾರೋ, ಆ ರೀತಿಯಲ್ಲಿ ಅಭಿವೃದ್ಧಿ ಆಗಲಿಲ್ಲ. ನಮಗಿರುವ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಅಷ್ಟೇನೂ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ವಿದ್ಯಾಭ್ಯಾಸ ತೆಗೆದುಕೊಳ್ಳಿ. ಅದು ಕೂಡ ಡಿಕ್ಲೈನ್ ಆಗುತ್ತಾ ಇದೆ. ಪಕ್ಕದ ರಾಜ್ಯವಾದ ಕೇರಳ ತೆಗೆದುಕೊಳ್ಳಿ. ಅಲ್ಲಿ ವಿದ್ಯಾಭ್ಯಾಸಕ್ಕೆ ಎಷ್ಟು ಖರ್ಚು ಮಾಡುತ್ತಿದಾರೆ? ಅಲ್ಲಿ 25 ಪರ್‌ಸೆಂಟಿಗಿಂತಲೂ ಜಾಸ್ತಿ ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ಬರೇ 20 ಪರ್‌ಸೆಂಟ್ ಮಾತ್ರ. ಅದ್ದರಿಂದ ನನಗನಿಸುತ್ತದೆ, ಇವರು ಸರಿಯಾದ ಒಂದು ಚಿತ್ರವನ್ನು ಇಲ್ಲಿ ಕೊಟ್ಟಿಲ್ಲವೆಂದು. ಇನ್ನು ಪಬ್ಲಿಕ್ ಡೆಟ್ ವಿಚಾರದಲ್ಲಿ ಬಹಳ ಮಾತನಾಡಿದ್ದಾರೆ. ನಾವು ಸ್ವಲ್ಪ ಹುಶಾರಾಗಿರಬೇಕು ಎಂದು ಹೇಳುತ್ತಿದ್ದಾರೆ. It is still not alarming. ಎಷ್ಟು ಅನೆಟ್ ಕ್ರಿಯೇಟ್ ಮಾಡಿದ್ದಾರೆ? ಆದರೂ ನೀವೇನೂ ಭಯಪಡಬೇಕಾದ್ದಿಲ್ಲವೆಂದು ಹೇಳುತ್ತಾರೆ. ಇದು ಅಷ್ಟು ಒಳ್ಳೆಯದಲ್ಲ ಎಂದು ನಾನು ಇಲ್ಲಿ ಹೇಳುತ್ತಿರುವುದು. ಇವನ್ನು ಇಲ್ಲಿ ನೋಡಿ, ಮುಂದೆ ಏನಾಗುತ್ತದೆ ಎನ್ನುವುದನ್ನು ಇಲ್ಲಿ ಹೇಳುತ್ತೇನೆ. ಬಂಡವಾಳದ ಸಲುವಾಗಿ ಹಿಂದೆ ಯಾವ ರೀತಿ 57—58 ರಲ್ಲಿ ಖರ್ಚು ಮಾಡಿದ್ದೀರಿ ಇದು ಆ ರೀತಿ ಮಾಡುತ್ತಿಲ್ಲ. Sir, the dangerous position has been reached, interest charges should not increase by more than 10 per cent of the normal revenues. Now we have come to 10.7 per cent on interest charges on debts. 57—58ರಲ್ಲಿ ಕ್ಯಾಪಿಟರ್ ಔಟ್‌ಲೇ 7.8 ರಷ್ಟು ಇದ್ದದ್ದು 67ರಲ್ಲಿ 13,62 49,444 ಕ್ಯಾಪಿಟರ್ ನರ್‌ಪ್ಲಸ್ ಇದ್ದದ್ದು ಇಂದು ಏನಾಗಿದೆ! beyond the control is one thing; but the danger is not realised. ಕಾಲಕ್ರಮೇಣ ನಾಲದ ಹೊರೆ ನಿಮಗೆ ಜಾಸ್ತಿಯಾಗುತ್ತಾ ಬರುತ್ತಿದೆ. ಇದರಿಂದಾಗಿ ಬಂಡವಾಳದಲ್ಲಿ ಎಷ್ಟು ಹಣವನ್ನು ಒದಗಿಸಿಟ್ಟಿದ್ದೀರಿ? ಡೆಟ್ ಚಾರ್ಜಸ್ ಕಮ್ಮಿ ಯಾಗಲಿಲ್ಲ ಒಂದೇ ರೀತಿಯಾಗಿ ಮೆಂಟೇನ್ ಮಾಡಿಕೊಂಡು ಬರುತ್ತಿದ್ದೀರಿ. ಮೈನೂರು ಫೈನಾನ್ಸ್ ಕಮಿಟಿಗೂ ಒಂದು ರೀತಿಯಾಗಿ ಸೂಚನೆ ಕೊಟ್ಟಿದ್ದೀರಿ. rationalisation of loans; that is the old story that is going on. ಡೆಟ್ ಚಾರ್ಜ್‌ಸ್ ಎನ್ನುವುದು 33 ಕೋಟಿಯಷ್ಟಾದರೆ

ಅವಕ್ಕೆ ತಕ್ಕಂತೆ ರಿಪೇಮೆಂಟು ಚಾರ್ಜುಗಳನ್ನೇ ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲೂ ಗಮನಕ್ಕೆ ತೆಗೆದುಕೊಂಡಹಾಗೆ ಕಾಣುತ್ತಿಲ್ಲ. ಮುಂದಿನ ಪೀಳಿಗೆಯವರಿಗೆ ಇದರಿಂದೇನೂ ಭಯವಿಲ್ಲ ಎನ್ನುವ ಮಾತನ್ನು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಇದರಿಂದೇನೂ ಅಪಾಯವಿಲ್ಲ ಎಂದು ನೀವೇ ಇಲ್ಲಿ ಒಂದು ಸಮಸ್ಯೆಯನ್ನು ಸೃಷ್ಟಿ. ಮಾಡುತ್ತಿದ್ದೀರಿ. ಇಂಟರೆಸ್ಟ್ ಚಾರ್ಜಸ್ ಹಾಗೂ ಮೆಂಟೆನೆನ್ಸ್ ಚಾರ್ಜುಗಳ ಒಂದು ಭಾಗವಾಗುವುದಿಲ್ಲ. ಇಂದಿನ ಈ ಪರಿಸ್ಥಿತಿ ಎಲ್ಲ ಕಡೆಗಳಲ್ಲಿಯೂ ಇದೆ. ಅವರಿಂದ ಅನೇಕ ದೇಶಗಳಲ್ಲಿರುವ ಫೈನಾನ್ಸ್ ಮಿನಿಸ್ಟರುಗಳೂ ಇದನ್ನೇ ಹೇಳಿದ್ದಾರೆ. ಇನ್‌ವೆಸ್ಟ್‌ಮೆಂಟಿಗೆ ತಕ್ಕಷ್ಟು ರಿಟರ್ನ್ ಬರುತ್ತಿಲ್ಲ. ಈಗ ಇಲ್ಲಿ ಇಂಟರೆಸ್ಟ್ ಚಾರ್ಜಸ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ, ಮೆಂಟೆನೆನ್ಸ್ ಚಾರ್ಜುಗಳನ್ನು ಕೊಡುವುದಕ್ಕೂ ಸಾಧ್ಯವಿಲ್ಲ. ನೀವು ಬೇಕಾದರೆ ಇದೇ ಸಂದರ್ಭದಲ್ಲಿ ಯಾವ ಇರಿಗೆಷನ್ ಪ್ರಾಜೆಕ್ಟ್‌ನ್ನಾದರೂ ತೆಗೆದು ಕೊಳ್ಳಿ. ಅದರಿಂದ ಗೊತ್ತಾಗುತ್ತದೆ. ನಮ್ಮ ನೀರಾವರಿ ಯೋಜನೆಗಳನ್ನು ನೋಡಿ. ಇರೀಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡುವಾಗ ಅದಕ್ಕೆ ಕೊಟ್ಟಷ್ಟು ಹಣಕ್ಕೆ ಬೇಗನೆ ತಕ್ಕ ರಿಟರ್ನ್ ಬರುವುದಿಲ್ಲ. ಅದನ್ನು ಒಪ್ಪೋಣ. ಆದರೆ ಇಲ್ಲೇ ಸರಕಾರದವರು ಕೊಟ್ಟಿರುವ ಒಂದು ಪಟ್ಟಿ ನೋಡಿದರೆ ಇದರಲ್ಲಿರುವ ಕೋ-ಆಪರೇಟೀವ್ ಸಂಸ್ಥೆಗಳಿಂದೇಕೆ ಸಾಕಾದಷ್ಟು ಆದಾಯ ಸರಕಾರಕ್ಕೆ ಬರುತ್ತಿಲ್ಲ? What has happened to these Co-operative Institution? ಸರಕಾರದವರು ಇಂತಹ ಕೋ-ಆಪರೇಟೀವ್ ಸೊಸೈಟಿಗಳಿಗೆ ಸಾಲಗಳನ್ನು ಕೊಡುತ್ತಾರೆ ಶೇಕಡಾ 75 ರಷ್ಟು ಇನ್‌ವೆಸ್ಟ್ ಮಾಡಿ ಇದರಿಂದ ರಿಟರ್ನ್ ಬರುವುದು ನೋಡಿದರೆ 4.5 ರಷ್ಟು. ಎಂದರೆ, ಇಲ್ಲಿ 2.34 ರಷ್ಟು ಇಂಟರೆಸ್ಟ್ ಚಾರ್ಜ್ ಕೂಡ ಕವರ್ ಆಗುವುದಿಲ್ಲ, ಮೇಂಟೇನ್ ಮಾಡುವ ಚಾರ್ಜಸ್ ಕೊಡುವುದಕ್ಕಾಗುವುದಿಲ್ಲ. ಯಾವ ಆಧಾರದ ಮೇಲೆ ಹಣ ತೆಗೆದುಕೊಂಡು ಇಷ್ಟು ದೊಡ್ಡ ಸಾಲದ ಹೊರೆಯನ್ನು ಹೊರುತ್ತಿದ್ದೀರಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಈಗ ಇಷ್ಟು ವರ್ಷಗಳ ಯೋಜನೆಯಾದನಂತರ ವಾಸ್ತವಿಕವಾಗಿ ನಿಮಗೆ ಎಷ್ಟು ಹೊರೆ ಹೆಚ್ಚಾಗಿದೆ ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿರುವುದು. ಏನೋ ಚುನಾವಣೆಗೆ ಮುಂಚೆ ಇದನ್ನು ಹೇಳಿದ್ದರೆ ಆಗ ಒಂದು ರೀತಿಯಾಗಿ ಹೇಳಬಹುದಾಗಿತ್ತು. 66—67 ರಲ್ಲೇ ಚುನಾವಣೆ ಮುಗಿದು ಹೋಗಿದ್ದರೂ ಇಷ್ಟು ಹೆಚ್ಚು ಹೊರೆ ಬರಲು ಕಾರಣಗಳೇನು? ಇದೇ ರೀತಿ ಅನೇಕ ರಾಜ್ಯ ಸರಕಾರಗಳ ಪರಿಸ್ಥಿತಿಯೂ ಆಗಿದೆ. ಅದೇನೋ ಹೌದು. ಆದರೆ ನಾನು ಮಾನ್ಯ ಅರ್ಥ ಸಚಿವರಿಂದ ಅವರು ಭಾಷಣಮಾಡುವಾಗ ಒಂದು ವಿಚಾರವನ್ನು ನಿರೀಕ್ಷಿಸಿದ್ದೆ. ಇಂತಹ ಸಮಸ್ಯೆಗಳು ಎಲ್ಲ ಕಡೆಗಳಲ್ಲೂ ಬಂದಿವೆ. ಇದರಿಂದಾಗಿ ಡೆವಲಪ್‌ಮೆಂಟು ಕೆಲಸಗಳನ್ನು ಮಾಡುವಾಗ ಅನೇಕ ತೊಂದರೆಗಳು ಬರುತ್ತವೆ. ಲೋಪದೋಷಗಳು ಬರುತ್ತವೆ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಪ್ರತಃಕರಣ ಮಾಡಿ ನಿಮ್ಮ ನೀತಿ ಯಾವ ರೀತಿಯಾಗಿ ಹೋಗುತ್ತಿದೆ ಎನ್ನುವುದನ್ನು ಇದರಲ್ಲಿ ಹೇಳಬೇಕಾಗಿತ್ತು. ಕಳೆದ ವರ್ಷ ಇದ್ದಂತಹ ನೀತಿಯಂತೆ ಈ ವರ್ಷ ಏಕೆ ಅನುಸರಿಸಲಿಲ್ಲ? ಕಳೆದ ವರ್ಷದಲ್ಲಿ ಅರ್ಥ ಸಚಿವರು ಇಲ್ಲಿ ಭಾಷಣ ಮಾಡುವಾಗ ಪ್ರತ್ಯೇಕವಾಗಿ ಒಂದು ಪ್ಯಾರಾವನ್ನು Centre and state relationship ಎಂದು ಹೇಳಿದ್ದರು. ಆದರೆ ಇಂದು ಮಾಡಿರುವ ಈ ಬಡ್ಜೆಟ್ ಭಾಷಣದಲ್ಲಿ ಇದರ ಬಗ್ಗೆ ಯಾವ ಮಾತೂ ಇಲ್ಲ. ಇದರಿಂದ ನಮ್ಮ ರಾಜ್ಯಕ್ಕೂ ಕೇಂದ್ರ ಸರಕಾರಕ್ಕೂ ಯಾವ ಹೊಂದಾಣಿಕೆಯೂ ಇಲ್ಲ ಎಂದು ಹೇಳಬೇಕಾಗುತ್ತದೆ. ನುಮ್ಮನೆ ಇದರ ಬಗ್ಗೆ ಎಲ್ಲರೂ ಟೀಕೆ ಮಾಡುತ್ತಾರೆ ಎಂದು ಹೇಳಬಹುದು. ಹೋದ ವರ್ಷ ಹೇಳಿದ ನಿಮ್ಮ ನೀತಿಯ ಬಗ್ಗೆ ಇಂದು ಆ ಮಾತೇ ಇಲ್ಲ. ಇದು ಬಹು ಮುಖ್ಯವಾದ ಕಾರಣ. ಕೇಂದ್ರ ಸರಕಾರದ ನೀತಿ ಹೇಗಿದೆ ಇದರ ಬಗ್ಗೆ ರಾಜ್ಯ ಸರಕಾರ ಯಾವ ರೀತಿಯಾಗಿ ಕೆಲಸಗಳನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ಸಾಕಷ್ಟು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಇಲ್ಲಿ ಹೇಳಿರುವುದು ನೋಡಿ ನನಗೆ ಬಹಳ ಆಶ್ಚರ್ಯ ಉಂಟಾಗಿದೆ.

ಶ್ರೀ ಸೂರ್ಯನಾರಾಯಣ ಅಡಿಗ.—ಕೇಂದ್ರ ಸರಕಾರ ಇದರಲ್ಲಿ ಬರಲಿಕ್ಕಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಕೇಂದ್ರ ಸರಕಾರದ ಬಗ್ಗೆ ಹೋದ ಸಾರಿ ಏಕೆ ಆ ರೀತಿ ಭಾಷಣ ಮಾಡಿದರು ಎಂದು ಇಲ್ಲಿ ಪ್ರೇಳುತ್ತಿದ್ದೇವೆ. ಇಂತಹ ಸಮಸ್ಯೆಗಳನ್ನು ಸರಿಯಾಗಿ ತುಲನ ಮಾಡಿ ನೋಡಿ ಅದನ್ನು ಬಗೆಹರಿಸಲು ತಕ್ಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿತ್ತು. ಇದನ್ನು ಸರಿಯಾಗಿ ಅವರು ಗಮನಿಸಿಲ್ಲ ಎಂದು ತೋರುತ್ತದೆ.

ಇನ್ನೊಂದು ವಿಚಾರ ಇದರಲ್ಲಿ ಎಲ್ಲರೂ ಹೇಳುತ್ತಿದ್ದಾರೆ. ಅದು Rationalisation of loans ಎನ್ನುವುದರ ಬಗ್ಗೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಈಗಾಗಲೇ ಮೈಸೂರು ಸರಕಾರಕ್ಕೆ ಕೇಂದ್ರ ಸರಕಾರದವರು ರ್ಯಾಷನಲೈಸೇಷನ್ ಆಫ್ ಲೋನುಗಳ ಬಗ್ಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆಂದು ಕೇಳುತ್ತೇವೆ. ಆದರೆ ಈ ಸಾರಿ ಮಾಡಿರುವ ಭಾಷಣ

(ಶ್ರೀ ಎಂ. ಸಿ. ನರಸಿಂಹನ್)

ದಲ್ಲಿ ಇದರ ಯಾವ ಒಂದು ಮಾತೂ ಕೂಡ ಇಲ್ಲ. The Chief Minister of Madras has referred to this in the Budget. State Government has pressed about the Rationalisation of loans. I am not satisfied in it. ನಮ್ಮ ಮುಖ್ಯ ಮಂತ್ರಿಗಳಿಗೆ ಮದ್ರಾಸಿನ ಮುಖ್ಯಮಂತ್ರಿಗಳಾದ ಶ್ರೀ ಅಣ್ಣಾದೊರೆಯವರನ್ನು ಕಂಡರೆ ಬಹಳ ಅಭಿಮಾನ. ಅದರಿಂದ ಅವರೂ ಇದರ ಬಗ್ಗೆ ಹೇಳಿದ್ದಾರೆ. ಮಾನ್ಯ ಕಾಂತಪ್ಪ ಶೆಟ್ಟರಿಗೆ ಕೇರಳ ಚೀಫ್ ಮಿನಿಸ್ಟರ ಬಗ್ಗೆ ಹೇಳಿದರೆ ಅವರಿಗೆ ಸಂತೋಷವಾಗುತ್ತದೆ. ಮತ್ತು ಅವರಿಗೆ ಮದ್ರಾಸು ಚೀಫ್ ಮಿನಿಸ್ಟರು ಹೇಳುವುದು ಅಪ್ಯಾಯಮಾನವಾಗುವುದಿಲ್ಲ. ನಮ್ಮ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರಿಗೆ ಅಣ್ಣಾದೊರೈರವರ ಬಗ್ಗೆ ಬಹಳ ಅಭಿಮಾನ, ಬೇರೆ ಸರಕಾರದ ಬಗ್ಗೆ ಇಲ್ಲ. ಅಗಿಂದಾಗ್ಗೆ ಇದನ್ನು ಅವರು ಹೇಳುತ್ತಿರುತ್ತಾರೆ. ಅವರ ದೃಷ್ಟಿಯಲ್ಲಿ ಪಶ್ಚಿಮ ಬಂಗಾಲ ಬರುವುದಿಲ್ಲ. ಹಾಗೂ ಕೇರಳ ಸರಕಾರ ಬರುವುದಿಲ್ಲ. ಯುನೈಟೆಡ್ ಫ್ರಂಟ್ ಸರಕಾರಗಳು ಯಾವುದೂ ಸರಿಯಾಗಿಲ್ಲ. ಮದ್ರಾಸು ರಾಜ್ಯ ಒಂದರಲ್ಲಿ ಮಾತ್ರ ಡಿ. ಎಂ. ಕೆ. ಆಡಳಿತ ಸರಿಯಾಗಿದೆ ಎನ್ನುವ ಒಂದು ಅಂಶವನ್ನು ಅವರು ಕೆಲವು ಕಡೆ ಹೇಳಿದ್ದಾರೆ.

ಶ್ರೀ ಕೆ. ಕಾಂತಪ್ಪಶೆಟ್ಟಿ.—ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮದ್ರಾಸು ಮುಖ್ಯ ಮಂತ್ರಿಗಳಾದ ಶ್ರೀ ಅಣ್ಣಾದೊರೈರವರು ಎನ್. ಸಿ. ಸಿ. ಯನ್ನು ತೆಗೆದುಹಾಕಿದಾಗ ಹಿಂದಿ ಚಳುವಳಿ ನಡೆದಾಗ ಅದನ್ನು ಉಗ್ರವಾಗಿ ಟೀಕೆ ಮಾಡಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಅನೇಕ ಸಂದರ್ಭಗಳಲ್ಲಿ ಯುನೈಟೆಡ್ ಫ್ರಂಟು ಸರಕಾರಗಳು ಸರಿಯಾಗಿಲ್ಲ ಆದರೆ ಡಿ. ಎಂ. ಕೆ. ಸರಕಾರ ಮಾತ್ರ ಸರಿಯಾಗಿ ಕೆಲಸ ಮಾಡುತ್ತಿದೆ ಎನ್ನುವ ಒಂದು ಮಾತನ್ನು ಇಲ್ಲಿ ಹೇಳಿದ್ದಾರೆ. ಇದನ್ನೂ ತಾವು ಸ್ವಲ್ಪ ಯೋಚನೆ ಮಾಡಿನೋಡಬೇಕಾಗಿದೆ. ನಾನು ಇಲ್ಲಿ ಹೇಳುತ್ತಿರುವುದು out of context ಏನೂ ಆಗುವುದಿಲ್ಲ. ಮದ್ರಾಸಿನ ಮುಖ್ಯ ಮಂತ್ರಿಗಳಾದ ಅಣ್ಣಾದೊರೈರವರು ರ್ಯಾಷನಲೈಸೇಷನ್ ಆಫ್ ಲೋನ್ಸ್ ಬಗ್ಗೆ ಏನು ಹೇಳುತ್ತಿದ್ದಾರೆಂದರೆ, ಬಡ್ಡಿ ಶೇಕಡಾ ಎರಡರಷ್ಟು ಇದ್ದದ್ದು ಈಗ ಶೇಕಡಾ ನಾಲ್ಕೂವರೆಯಷ್ಟು ಹೆಚ್ಚಾಗಿ ಹೋಗುತ್ತಿದೆ. ಇದರಲ್ಲಿ ಜಗಳ ಮಾಡುವುದು ಬೇಡ, ರಾಜ್ಯ ಸರಕಾರ ಕೇಂದ್ರ ಸರಕಾರ ಶೇಕಡಾ ನಾಲ್ಕೂವರೆಯಷ್ಟು ಎಂದು ಮಾಡಿದರೆ ಶೇಕಡಾ ಎರಡರಷ್ಟು ಕಮ್ಮಿ ಮಾಡಿದಂತಾಗುವುದಿಲ್ಲ. ಇದರಲ್ಲೇನೋ ತಪ್ಪು ಇದೆ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಲು ಇಚ್ಛಿಸುತ್ತೇನೆ. ಕೇಂದ್ರ ಸರಕಾರದವರು ಕೊಟ್ಟರತಕ್ಕ ಸಾಲದ ಬಗ್ಗೆ ವಿಚಾರ ಮಾಡಿದರೆ ಎಷ್ಟು ಬಡ್ಡಿ ಕೊಡಬೇಕಾಗುತ್ತದೆ ಎನ್ನುವುದನ್ನು ವಿಚಾರ ಮಾಡಿದರೆ ನಿಜವಾಗಿಯೂ ಮನಸ್ಸಿಗೆ ಭಯವಾಗುತ್ತದೆ. ಇದನ್ನು ಎತಕ್ಕೆ ಹೇಳುತ್ತೇನೆ ಅಂದರೆ, ಇಲಾಸ್ಟಿಕ್ ರೆವೆನ್ಯೂ ಇರುವುದಿಲ್ಲ. ಇನ್-ಇಲಾಸ್ಟಿಕ್ ರಿಸೋರ್ಸಸ್ ಇರುತ್ತವೆ. ಆದುದರಿಂದ ಮಲ್ಲಾರಾಧ್ಯರ ಮಾತು ನನಗೆ ಅರ್ಥವಾಗುವುದಿಲ್ಲ.

12 Noon

Sri J. B. MALLARADHYA.—I will be one with you in saying that the Government of India should help us at lower rate of interest. The point is, they charge higher rate because they also take at higher rate. If they are getting at lower rate and charge us higher rate, I am one with you.

Sri M. C. NARASIMHAN.—If all the loans are taken into account, it will be lower. Really they are not going to split up as a result of this. ಆದುದರಿಂದ ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡುತ್ತಾರೆ ಎಂದು ಟೀಕೆ ಮಾಡುತ್ತಾರೆ.

ಎರಡನೆಯದಾಗಿ ಒಂದು ವಿಷಯ ಹೇಳಬೇಕಾಗಿದೆ. ಕಳೆದ ಎರಡು ವರ್ಷಗಳಲ್ಲಿ ಅಂದರೆ 1967—68 ಮತ್ತು 1968—69 ಈ ಅವಧಿಯಲ್ಲಿ ಕೇಂದ್ರ ಸರಕಾರದವರು ರಾಜ್ಯ ಸರಕಾರದವರಿಗೆ ಕೊಡುವ ಸಹಾಯ ಧನದ ಸ್ಕೇಲು ಕಡಿಮೆಯಾಗಿದೆ. ಒಂದುವರ್ಷದ ಸರಿಯಾದ ಅಂಕಿಅಂಶಗಳನ್ನು ಕೊಡುತ್ತೇನೆ. ಈ ವರ್ಷ ಎಲ್ಲ ರಾಜ್ಯಗಳಿಗೂ ಸೇರಿ 559 ಕೋಟಿ ಒಟ್ಟು ಕೊಟ್ಟಿದ್ದಾರೆ. ಆದರೆ ಅದು 612 ಕೋಟಿ ಆಗಬೇಕಾಗಿತ್ತು. ಅದನ್ನು ಕ್ರಮೇಣ 559 ಕೋಟಿಗೆ

ಇಳಿಸಿದ್ದಾರೆ. ಅಲ್ಲದೆ ಟ್ಯಾಕ್ಸ್ ಹೆಚ್ಚು ಮಾಡಿದ್ದಾರೆ. ಹೋದ ವರ್ಷ 300 ಕೋಟಿ, ಈ ವರ್ಷ 300 ಕೋಟಿ ಹಂಚಬೇಕಾಗಿತ್ತು. ಆದರೆ ಹಣ ಕೊಡುವುದನ್ನು ಕ್ರಮೇಣ ಕಡಿಮೆ ಮಾಡುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ಅವರು ಕಾರಣ ತೋರಿಸಬೇಕಾಗಿತ್ತು. ಇದರಲ್ಲಿ ಮುಚ್ಚುಮರೆ ಏತಕ್ಕೆ ಮಾಡುತ್ತಾರೆ?

ಇನ್ನೊಂದು ವಿಷಯ ಅವರು ಹೇಳಬೇಕಾಗಿತ್ತು. ಅದನ್ನು ಮಾನ್ಯ ಹಣಕಾಸಿನ ಸಚಿವರು ಹೇಳಿಲ್ಲ. ಕೇಂದ್ರ ಸರಕಾರದ ನೌಕರರಿಗೆ ಹೆಚ್ಚು ನಂಬಳ ಕೊಡುತ್ತಿದ್ದಾರೆ. ಅದೇ ಪ್ರಮಾಣದಲ್ಲಿ ರಾಜ್ಯ ಸರಕಾರದವರೂ ತಮ್ಮ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯ ಕೊಡಬೇಕಾಗಿದೆ. ಇದಕ್ಕಾಗಿ ಕೇಂದ್ರ ಸರಕಾರದಿಂದ ಸಹಾಯ ಬರಬೇಕಾಗಿತ್ತು. ಸ್ವಲ್ಪ ಕೊನರಾಟ ಮಾಡಿದ್ದರೆ ಕೊಡುತ್ತಿದ್ದರು. ನಾಲ್ಕನೇ ಫೈನಾನ್ ಕಮಿಷನ್ಸ್ ಅವರು ಒಂದು ಮಾತು ಹೇಳಿದ್ದಾರೆ. 1955—56 ನೇ ಇಸವಿಯಲ್ಲಿ ಡಿ. ಎ. ಹೆಚ್ಚು ಮಾಡಿದ ಪ್ರಮಾಣ ಗಣನೆಗೆ ತೆಗೆದುಕೊಂಡರೆ ಮುಂದೆ ಸಹ ಡಿ. ಎ. ಕೊಡುವ ವಿಚಾರದಲ್ಲಿ ಹೆಚ್ಚು ಖರ್ಚು ತಗಲಬಹುದು ಎಂದು ಸೂಚನೆ ಇದೆ. ಇದರಲ್ಲಿ ಫೈಗ್‌ಸಿಬರ್ ಫೈನಾನ್ಸ್ ಇರಬೇಕು ಎಂದು ಗಜೇಂದ್ರಗಡಕರ ಸಮಿತಿಯವರು ಸಹ ಹೇಳಿದ್ದಾರೆ. ಇದು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಇದರಲ್ಲಿ ಒಂದು ಸರಿಯಾದ ವ್ಯವಸ್ಥೆ ಇರಬೇಕು. ಮತ್ತು ಕೇಂದ್ರವು ರಾಜ್ಯ ಸರಕಾರಕ್ಕೆ ಸಹಾಯ ಮಾಡಬೇಕು. ಅವರು ಕೊರತೆ ಸರಿಪಡಿಸಲು ತೆರಿಗೆಹಾಕಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಹೆಚ್ಚು ತೆರಿಗೆ ಹಾಕುವುದು ಸರಿಯಲ್ಲ.

ಇನ್ನೊಂದು ವಿಷಯ. 257 ಕೋಟಿವರೆಗೆ ಕೇಂದ್ರಕ್ಕೆ ಕೊಡಬೇಕಾದ ಸಾಲ ಇದೆ. ಈ ಸಾಲ ತೀರ್ವೆಗೋನ್ಕರ ಪ್ರತಿ ವರ್ಷ ಇಂತಿಷ್ಟು ಹಣ ಎಂದು ಬದಿಗೆ ಇಡುತ್ತಾ ಬಂದಿದ್ದಾರೆ ಇದರ ಬಗ್ಗೆ ಕೇಂದ್ರ ಸರಕಾರ ಕಾರಾರುವಾಕ್ಕಾಗಿ ತಾಕೀತು ಮಾಡಲಿಲ್ಲ. ನಾಲ್ಕನೇ ಫೈನಾನ್ಸ್ ಕಮಿಷನ್ ರಿಪೋರ್ಟ್ ಬಂದ ಮೇಲೆ ಕರಾರುವಾಕ್ಕಾಗಿ ಇಂತಿಷ್ಟು ಹಣ ಇಡಬೇಕು ಎಂದು ಹೇಳುತ್ತಾರೆ. ಕಳೆದ ವರ್ಷಕಿಂತ ಈ ವರ್ಷ ಹೆಚ್ಚು ಹಣ ಬದಿಗೆ ಇಡುತ್ತಿದ್ದಾರೆ. ಈ ವಿಚಾರದಲ್ಲಿ ನಿಜವಾಗಿಯೂ ಕೇಂದ್ರದಿಂದ ಹೆಚ್ಚು ಪ್ರಮಾಣದಲ್ಲಿ ಸಹಾಯ ಬರಬೇಕಾಗಿತ್ತು. ಕೆಲವು ರಾಜ್ಯಗಳು ಸಿಂಕಿಂಗ್ ಫಂಡ್ ಎಂದು ಕೊಡುತ್ತಿದ್ದಾರೆ. ಒಟ್ಟಿನಲ್ಲಿ ಹೆಚ್ಚು ಹಣ ಈ ಸಾಲ ತೀರ್ವೆಗೆ ಕೊಡಬೇಕು. ಆದುದರಿಂದ ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಹಾಗು ಈ ವಿಚಾರ ಕೇಂದ್ರ ಸರ್ಕಾರಕ್ಕೂ ತಿಳಿಸಬೇಕು. ಹಾಗು ಒತ್ತಾಯ ಮಾಡಬೇಕು.

ಇನ್ನು ಪೇ ಸ್ಕೇಲ್ಸ್ ಇರತಕ್ಕ ಪ್ರಮಾಣದಲ್ಲಿ ತುಟ್ಟಿ ಭತ್ಯ ಕೊಡುತ್ತಿದ್ದಾರೆ. ಇದರಿಂದ ವಿಪರೀತ ಖರ್ಚಾಗುತ್ತಿದೆ, ಇದರಿಂದ ತೊಂದರೆ ಬಂದಿದೆ ಎಂದು ಹೇಳುತ್ತಾರೆ. ಆದರೆ ಅಂಕಿ ಅಂಶಗಳನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕು. ಇದು ರಿಸೋರ್ಸಸ್‌ಗೆ ಹೊಂದಿ ಕೊಂಡಿರಬೇಕು. ರಿಸೋರ್ಸಸ್ ಹೆಚ್ಚು ಮಾಡತಕ್ಕಂಥ ಕಾಲದಲ್ಲಿ ಖರ್ಚು ಅದಕ್ಕೆ ಹೆಚ್ಚು ಮಾಡತಕ್ಕಂಥಾದ್ದು ನ್ಯಾಯವಾದುದು. ದೇಶದಲ್ಲಿ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವಾಗ್ಗೆ ಜಾಸ್ತಿ ಖರ್ಚುಮಾಡುವುದು ಸರಿಯಾದುದು. ರಿಸೋರ್ಸಸ್ ಪ್ರಮಾಣದಲ್ಲಿ ಖರ್ಚು ಇದೆಯೇ ಎನ್ನುವುದನ್ನು ಪರಿಶೀಲನೆಮಾಡಿ ನೋಡಬೇಕು. ಇಲ್ಲಿ ಒಂದು ಮಾತು ಹೇಳಬಹುದು. ನಮ್ಮ ನೆರೆ ರಾಜ್ಯಗಳಿಗಿಂತ ಇಲ್ಲಿ ಬಹಳ ಕಡಿಮೆಯಾಗಿದೆ. ನಮ್ಮ ರಾಜ್ಯದ ರೆವಿನ್ಯೂ ಪ್ರಮಾಣಕ್ಕೆ ಖರ್ಚು ಮಾಡುತ್ತಿರುವುದು ಕಡಿಮೆಯಾಗಿದೆ. ಈ ವಿಚಾರದಲ್ಲಿ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ.

Madras spends 21.3 per cent. In 1951—52, 16. 5 per sent of its revenues were being spent on administrative services by Madras.

Bombay	19.6 per cent
Andhra	17.4 per cent
Average	16.4 per cent

Mysore always spends 12 per cent. To-day also it is the same. Total expenditure even to-day is not more than 13 per cent.

ಬೇರೆ ನೆರೆಹೊರೆಯ ರಾಜ್ಯಗಳಿಗೆ ಹೋಲಿಸಿದರೂ ನಾವು ಕಡಿಮೆ ಖರ್ಚು ಮಾಡುತ್ತಿದ್ದೇವೆ; ನಾವು ಕಡಮೆ ಸರ್ಕಾರಿ ನೌಕರರುಗಳಿಗೆ ಕೊಡುತ್ತಿದ್ದೇವೆ; ರಿಕ್ರೂಟ್ ಮಾಡುವಾಗ ಬಹಳ ಕಡಮೆ ಸಂಬಳವನ್ನು ಕೊಡುತ್ತೇವೆ. ಇತರ ಕಡೆಗಳಿಗಿಂತ ನಮ್ಮಲ್ಲಿನ ಸಂಬಳದ ಸ್ಕೇಲು ಬಹಳ ಕಡಮೆ ಇದೆ.

(SRI M. C. NARASIMHAN)

We were paying less to Government servants. At the lower services we have inherited one of the most inefficient administrative services. If you pay highest you can get the best, if you pay lowest, you get the least efficient persons.

ಎರಡನೆಯದು, ಒಬ್ಬರು ಮಾಡುವ ಕೆಲಸವನ್ನು ಇಬ್ಬರು ಮಾಡಬೇಕು. ನಮ್ಮ ಸೆಕ್ರೆಟೇರಿಯಟ್ ಮದ್ರಾಸ್ ಸೆಕ್ರೆಟೇರಿಯಟ್‌ಗಿಂತ ದೊಡ್ಡದಾಗಿರುವುದಕ್ಕೆ ಅಷ್ಟೊಂದು ಸರಿಯಾದ ಕಾರಣಗಳಿಲ್ಲ. ಎ. ಜಿ. ರಾಮಚಂದ್ರರಾಯರ ಕಮಿಟಿಯವರು ಇದನ್ನು ವ್ಯಕ್ತ ಮಾಡಿದ್ದಾರೆ. ಒಬ್ಬರು ಮಾಡತಕ್ಕ ಕೆಲಸವನ್ನು ಇಬ್ಬರಿಗೆ ಹಚ್ಚುತ್ತೀರಿ, ಅದರಿಂದ ಆಡಳಿತದಲ್ಲಿ ದಕ್ಷತೆ ಕಡಮೆ. ಆಡಳಿತ ವೆಚ್ಚ ಬಹಳ ಜಾಸ್ತಿಯಾಗಿ ಆಗುತ್ತಿದೆ ಎಂದು ಹೇಳುತ್ತೀರಿ. ಅದಕ್ಕೆ ಸರ್ಕಾರದವರೇ ಕಾರಣ, ನೌಕರರಲ್ಲ. ದೇಶದಲ್ಲಿ ಎಲ್ಲ ಪದಾರ್ಥಗಳ ಬೆಲೆಗಳೂ ಜಾಸ್ತಿಯಾಗುತ್ತಿರುವುದರಿಂದ ಅವರು ತುಟ್ಟಿಭತ್ಯವನ್ನು ಹೆಚ್ಚು ಮಾಡಬೇಕೆಂದು ಕೇಳುತ್ತಿದ್ದಾರೆ. ಶಾಸಕರ ಸಂಬಳವನ್ನು ಹೆಚ್ಚು ಮಾಡುತ್ತಿದ್ದೀರಿ. ಹೌಸ್ಪಿಟಾಲಿಟಿ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡುತ್ತಿದ್ದೀರಿ, ಐ. ಎ. ಎಸ್. ಅಧಿಕಾರಿಗಳ ಸಂಬಳದ ಸ್ಕೇಲು ಜಾಸ್ತಿಮಾಡುತ್ತಿದ್ದೀರಿ ಆದರೆ ಕೆಳದರ್ಜೆ ನೌಕರರಿಗೆ ಸಂಬಳಸಾರಿಗೆ ಜಾಸ್ತಿ ಆಗಬಾರದು ಎಂದರೆ ಅದರಲ್ಲಿ ಏನು ಅರ್ಥವಿದೆ ? ಈಗ ತುಟ್ಟಿಭತ್ಯವನ್ನು ಜಾಸ್ತಿ ಮಾಡಿದ್ದಾರೆ. ಜಸ್ಟಿಫಿಕೇಷನ್ ಇಲ್ಲದೆ ಸರ್ಕಾರದವರು ಕೊಡುತ್ತಾರೆಯೇ! ತುಟ್ಟಿಭತ್ಯವನ್ನು ಹೆಚ್ಚು ಮಾಡಲು justification ಏನು ಎಂದರೆ, ಬೆಲೆಗಳ ಹೆಚ್ಚುವಿಕೆ. ನೀವು ಎಷ್ಟು ತುಟ್ಟಿಭತ್ಯವನ್ನು ಕೊಟ್ಟರೂ ಅದರಿಂದ ಅವನಿಗೆ ಸುಖವೇನೂ ಆಗುತ್ತಿಲ್ಲ. 1957-58ರಲ್ಲಿ ರಿಯಲ್ ವೇಜಸ್ ಯಾವ ಮಟ್ಟದಲ್ಲಿತ್ತು, ಜೀವನ ಮಟ್ಟ ಮೂರು ಮತ್ತು ನಾಲ್ಕನೇ ದರ್ಜೆ ನೌಕರರ ಜೀವನ ಮಟ್ಟ ಯಾವ ರೀತಿಯಲ್ಲಿತ್ತೋ ಆ ಮಟ್ಟದಲ್ಲಿ ಈವೊತ್ತು ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಇಂಥ ಸ್ಥಿತಿಯಲ್ಲಿ ಅವರು ಇದ್ದಾರೆ.

ಅಡ್ಮಿನಿಸ್ಟ್ರೇಟಿವ್ ಸರ್ವಿಸಸ್‌ಗೆ ಆಗತಕ್ಕ ಖರ್ಚನ್ನು ಪಿನ್‌ಪಾಯಿಂಟ್ ಮಾಡಿ ಏನೊಂದು ಹೇಳಿದ್ದಾರೆ ಅದನ್ನು ನೋಡಿದರೆ ಇದರಲ್ಲಿ ಇತರ ಬಾಬುಗಳಿಗೆ ಆಗುವ ಖರ್ಚು ಜಾಸ್ತಿಯಾಗಿದೆ.

Administrative Services in the total non-development expenditure head : 57-58, it was 45·23 per cent and in 1967-68 it is 24·86 per cent. Formerly it was half and now it is reduced to quarter. Expenditure on collection of taxes has increased. Debt services have increased from 20·36 to 50 per cent. Pension and retirement from 9·93 to 5·08 per cent. Famine relief 2·08 to 0·90 per cent. Other items of non-plan expenditure 8·7 to 12·3 per cent.

ಆದುದರಿಂದ ಇವೊತ್ತು ನಾವು ನೋಡಬೇಕಾದುದು ಏನೆಂದರೆ, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗುತ್ತಿರುವ ಸಂಧರ್ಭದಲ್ಲಿ ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪೆಂಡಿಚರ್ ನಾವು ಕಡಮೆ ಮಾಡುತ್ತಿದ್ದೇವೆ.

It is a matter which we should be proud of, not try to point out we are spending more. In absolute terms it is true. ಇವೊತ್ತು ಎಲ್ಲವನ್ನೂ ರಿಸೋರ್ಸಸ್‌ಗೆ ಹೊಂದಿಕೊಂಡ ಹಾಗೆ ನೋಡಬೇಕೇ ಹೊರತು ಬಾಕಿ ರೀತಿಯಲ್ಲಿ ನೋಡುವುದಕ್ಕಾಗುವುದಿಲ್ಲ. ಹೆಚ್ಚು ಕಡಿಮೆ ಇರುವುದರಿಂದ ನಮಗೆ ತೊಂದರೆಯಾಗಿದೆ ಎನ್ನುವ ಭಾವನೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

If there is no expenditure on administrative services it will be the best plan. Is it the realistic way of looking at the problem ?

ಬೆಲೆಗಳು ಹೆಚ್ಚಾಗುತ್ತಿರುವಾಗ ಸಂಬಳ ಕಡಮೆ ಮಾಡುವುದಕ್ಕೆ ಯಾವ ರಾಜ್ಯದಲ್ಲಿಯೂ, ಎಂಥ ರಾಮರಾಜ್ಯದಲ್ಲಿಯಾದರೂ ಸಾಧ್ಯವಾಗುತ್ತದೆ ಎಂದು ಇದ್ದೀರಾ ? ಎಂದಿಗೂ ಸಾಧ್ಯವಿಲ್ಲ. ಅದನ್ನು ನಾವು ತಿಳಿದುಕೊಳ್ಳಬೇಕು.

ನೀರಾವರಿ ಯೋಜನೆಗಳ ವಿಷಯ ಮಾತನಾಡುವಾಗ ಮೂರನೆಯ ಯೋಜನೆಯಲ್ಲಿ ಏನು ಪ್ರಯಾರಿಟಿ ಕೊಟ್ಟಿದ್ದಾರೆ, ಏನಾಗಿದೆ ಎಂದು ನೋಡೋಣ. 17 per cent was the allotment in the Second Plan for Power, 28 per cent was the allotment in the Third Plan.

ಈಗ ಮತ್ತೆ ನಾವು ನೀರಾವರಿಗೆ ಪ್ರಾಮುಖ್ಯತೆ ಕೊಡಲು ಪ್ರಾರಂಭ ಮಾಡಿದ್ದೇವೆ. ಏನು ಯೋಜನೆ ಹಾಕುತ್ತಾರೆಯೋ ಎಂದು ನನಗೆ ಗೊತ್ತಾಗುತ್ತಿಲ್ಲ. ಮೂರು ಯೋಜನೆಗಳನ್ನು ನೋಡಿದಾಗ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು ಎಂದು ನನಗೆ ಗೊತ್ತಾಗುತ್ತಿದೆ. I was then one of those who thought that industry should receive certain amount of priority.

ಶರಾವತಿ ಯೋಜನೆಗೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದು ನೂರು ಕೋಟಿ ಇರಬೇಕಾಗಿತ್ತೋ ಎಷ್ಟಿರಬೇಕಾಗಿತ್ತು ಎನ್ನುವುದು ಬೇರೆ ವಿಷಯ. ನೂರು ಕೋಟಿ ರೂಪಾಯಿ ಖರ್ಚುಮಾಡಿ ಇವೊತ್ತಿನ ಪರಿಸ್ಥಿತಿ ಏನಾಗಿದೆ ಎಂದು ನೋಡೋಣ. ಶರಾವತಿಯಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಉಪಯೋಗಿಸುವುದಕ್ಕೆ ಏನು ಮಾಡಿದ್ದೀರಿ ಎಂದು ಕೇಳಿದಾಗ, ಎಷ್ಟು ಲೈನ್ಸ್ ಇದೆ, ಏನು ಕಥೆ, ಅದಕ್ಕೆ ಬೇಕಾಗುವ ವಿದ್ಯುತ್ತನ್ನು ಒದಗಿಸುವುದಕ್ಕೇ ಆಗುವುದಿಲ್ಲ, ಅಷ್ಟೊಂದು ಬೇಡಿಕೆ ಇದೆ ಎಂದು ಹೇಳಿದರು. ಆದರೆ ಅಲ್ಲಿ ಉತ್ಪತ್ತಿಯಾಗುವ ವಿದ್ಯುತ್ತಿನಿಂದ ನಾವು ಹೆಚ್ಚು ಪ್ರಯೋಜನವನ್ನು ಪಡೆಯುತ್ತಿಲ್ಲ ಎಂದು ಹೇಳಬೇಕಾಗಿದೆ. ಹೊರಗಿನ ರಾಜ್ಯಗಳಿಗೆ 12 ಪೈಸೆ ಪ್ರಕಾರ ಮಾತನಾಡಿದ್ದು ಅದನ್ನು 9 ಪೈಸೆಗಳಿಗೆ ಇಳಿಸಿ ಅದರಲ್ಲಿಯೂ ನಷ್ಟಕ್ಕೆ ಮಾರುತ್ತಿದ್ದೇವೆ.

Chief Minister proposed the rate of 12 np. to Madras in the presence of Sri K. Venkataraman, a responsible member of Planning Commission. It was scaled down to 9 np. You get marginal profit.

ಶರಾವತಿ ಯೋಜನೆಯ ಕೆಲಸಕ್ಕೆ 100 ಕೋಟಿ ರೂಪಾಯಿ ಹಾಕಿ ಅದರಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುವಾಗ ಅದರಲ್ಲಿ ವಿನಿಯೋಗ ಮಾಡುವ ಹಣದ ಪಡಿನ್ಯೆದಷ್ಟು ನಮಗೆ ಬರಬೇಕು. This is a very well known fact. ಸರ್ಕಾರಕ್ಕೆ ಈ ವಿಚಾರ ಗೊತ್ತಿಲ್ಲ ಎಂದರೆ ಏತಕ್ಕೂ ಪ್ರಯೋಜನವಿಲ್ಲ ಎಂದಾಗುತ್ತದೆ. ಆದುದರಿಂದ ಮೂರನೇ ಯೋಜನೆಯಲ್ಲಿ ಒಟ್ಟಿನಲ್ಲಿ ನರಿಯಾದ ರೀತಿಯಲ್ಲಿ ಸರ್ಕಾರದವರು ಯೋಜನೆಯನ್ನು ತಯಾರಿಸಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಕೂಡ ಜನತೆ ಕೊಟ್ಟಂಥ ತೆರಿಗೆಯನ್ನು ರೈತರು ಕೊಟ್ಟಿರುವ ಕಂದಾಯದ ಹಣವನ್ನು, ನರಿಯಾದ ರೀತಿಯಲ್ಲಿ ಉಪಯೋಗ ಮಾಡಿಲ್ಲ, ನರಿಯಾದ ರೀತಿಯಲ್ಲಿ ನಮಗೆ ಹೆಚ್ಚು ಅನುಕೂಲ ಬರುವ ಹಾಗೆ ಮಾಡಿಲ್ಲ. ನಾಲ್ಕನೆಯ ಯೋಜನೆಯಲ್ಲಿ take of stage ಎಂದು ಹೇಳುತ್ತಿದ್ದಾರೆ.

Is it really going to be a take off stage? It will be worse than this problem for so many years.

ಮುಂದಿನ ಸಾಲಿನಲ್ಲಿ ಬೆರೆ ಹೆಚ್ಚಾಗುತ್ತದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಈಗಾಗಲೇ 300 ಕೋಟಿ ರೂಪಾಯಿಗಳ ಕೊರತೆಯನ್ನು ಕೇಂದ್ರದ ಹಣಕಾಸು ವ್ಯವಸ್ಥೆಯಲ್ಲಿ ತೋರಿಸಿದ್ದಾರೆ, ರಾಜ್ಯಗಳಿಗೆ ಕೇಂದ್ರದಿಂದ ಬರಬಹುದಾದ ಸಹಾಯ ಧನವನ್ನು ಕಡಮೆ ಮಾಡಿದ್ದಾರೆ. ಮುಂದಿನ ಸಲ ಇನ್ನೂ ಕಡಮೆಯಾಗಬಹುದು. ಒಟ್ಟಿನಲ್ಲಿ ನೋಡಿದರೆ, ಕೇಂದ್ರ ಸರ್ಕಾರದ ಆಯವ್ಯಯವನ್ನು ಪರಿಶೀಲಿಸಿದರೆ ಪ್ರೈವೇಟ್ ಸೆಕ್ಟಾರಿಗೆ ಹೆಚ್ಚು ಡೆವಲಪ್‌ಮೆಂಟಿಗೆ ಅವಕಾಶ ಕೊಟ್ಟಿದ್ದಾರೆ. ಸರ್ಕಾರದಿಂದ ಆಗಬೇಕಾದ ಇನ್‌ವೆಸ್ಟ್‌ಮೆಂಟ್, ಕ್ಯಾಪಿಟಲ್ ಔಟ್‌ಲೇ ಏನಿತ್ತು ಅದು ಕಡಮೆಯಾಗಿದೆ. ಈಗ ಅಸೆಟ್ಸ್ ಕಡಮೆಯಾಗಿದೆ, ಎಷ್ಟು ಪ್ರಮಾಣದಲ್ಲಿರಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿಲ್ಲ. ರೈಲ್ವೆ ಅಥವಾ ಪಬ್ಲಿಕ್ ಸೆಕ್ಟಾರಿನಲ್ಲಿ ಎಷ್ಟು ಇನ್‌ವೆಸ್ಟ್‌ಮೆಂಟ್ ಆಗಬೇಕಾಗಿತ್ತೋ ಅಷ್ಟಾಗಿಲ್ಲ, ಅದಾಗುವ ಸೂಚನೆ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಕಾಣುವುದಿಲ್ಲ. ರಿಯಾಯಿತಿ ತೋರುವುದರಿಂದ ಮುಂದಿನ ಸಾಲಿನಲ್ಲಿ ದೊಡ್ಡ ಪ್ರಮಾಣದಲ್ಲಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅಸೆಟ್ಸ್ ಜಾಸ್ತಿಯಾಗದಿದ್ದರೆ ಮುಂದಿನ ಸಾಲಿನಲ್ಲಿ ಬೆರೆ ಏರುತ್ತದೆ ಎಂದು ಹೇಳಬಹುದು. ಇಂದು ನಾಲ್ಕನೆಯ ಪಂಚವಾರ್ಷಿಕ ಯೋಜನೆ ಸಾಕಷ್ಟು ಹಣ ಪಡೆದು ನರಿಯಾಗಿ ಮುಂದುವರೆಯುವುದೆಂಬ ಸೂಚನೆ ಕಂಡುಬರುತ್ತಿಲ್ಲ.

(SRI M. C. NARASIMHAN)

ಇನ್ನೊಂದು ವಿಷಯ. ವರಮಾನ ತೆರಿಗೆ ಬಾಕಿ ಬಹಳವಿದೆ, ಅದು ಹೆಚ್ಚಾದರೆ ಅದರ ದಾಮಾಷಾ ಪ್ರಕಾರ ನಮಗೆ ಬರಬೇಕಾದ ಭಾಗ ಬಹ ಕಡಮೆಯಾಗುವುದು. ಆದುದರಿಂದ ವರಮಾನ ತೆರಿಗೆ ಬಾಕಿಯಮೇಲೆ ನಮಗೆ ಒಂದು ಹತೋಟಿ ಇರಬೇಕು. ನಮ್ಮ ರಾಜ್ಯ ಸರ್ಕಾರದ ಬಾಕಿಗಿಂತ ಕೇಂದ್ರಸರ್ಕಾರದ ಬಾಕಿ ಹೆಚ್ಚಾಗಿದೆ, ಹಾಗಿರುವುದರಿಂದ ನಮಗೆ ಅದನ್ನು ಹಂಚುವಾಗ ರಿಸೋರ್ಸ್ಸ್ ಕಡಮೆಯಾಗುತ್ತದೆ. Book entry ಇರುತ್ತದೆಯೇ ಹೊರತು ನಮಗೆ ನಗದು ಸಿಕ್ಕುವುದಿಲ್ಲ. ಆದುದರಿಂದ ರಾಜ್ಯ ಸರ್ಕಾರ ಕೂಡ ಇದರ ಬಗ್ಗೆ ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಬೇಕು. ನಾನ್-ಟ್ಯಾಕ್ಸ್ ರೆವೆನ್ಯೂ ಕೂಡ ಕಡಮೆಯಾಗುತ್ತಿದೆ; ಕೋ-ಆಪರೇಟೀವ್ ಸೊಸೈಟೀಸ್ ಮುತ್ತಿತರ ಸೆಕ್ಟಾರುಗಳಲ್ಲಿ ಕಡಮೆಯಾಗಿದೆ. ಎಂ.ಎಸ್.ಆರ್.ಟಿ.ಸಿ. ರಿಟರ್ನ್ ಕೂಡ ಕಡಮೆಯಾಗಿದೆ. ಇದಕ್ಕೆ ಕಾರಣ ಒಂದು ಕಂಡುಹಿಡಿದಿದ್ದಾರೆ. ವಿದ್ಯುಚ್ಛಕ್ತಿ, ಬೋರ್ಡು, ಎಂ.ಎಸ್.ಆರ್.ಟಿ.ಸಿ. ಮುಂತಾದುವುಗಳಲ್ಲಿ ಎಲ್ಲಾ ರಾಜ್ಯದಲ್ಲೂ ಒಂದೇ ರೀತಿ ಇದೆ ಎಂದು ಹೇಳಬಹುದು. ನಮ್ಮದು ಒಂದು ಕಡೆ ಸ್ವಲ್ಪ ಮುಂದಿದೆ ಎಂದು ಹೇಳಬಹುದು. ದೆಹಲಿಯಲ್ಲಿ ಆಕ್ಸಿಡೆಂಟುಗಳು ಜಾಸ್ತಿಯಾಗಬಹುದು, ನಮ್ಮಲ್ಲಿ ಕಡಮೆ ಇರಬಹುದು. ಇಂದು ಕೊಟ್ಟಿರುವ ಅಂಕಿಅಂಶ ನೋಡಿ ತೃಪ್ತಿಪಡಬೇಕಾಗಿದೆ. ಇಂದು ಲೀಕೇಜಸ್ ಇರುವುದನ್ನು ಗಮನಿಸಿದರೆ ಪ್ರಯಾಣಿಕರ ಬಸ್ಸುಗಳಿಂದ ಹೆಚ್ಚು ಲಾಭ ಬರುವಂತೆ ಕಂಡುಬರುವುದಿಲ್ಲ. ಆದುದರಿಂದ ರಸ್ತೆ ಸಾರಿಗೆ ಕಾರ್ಪೊರೇಷನ್ ದೊಡ್ಡ ಪ್ರಮಾಣದಲ್ಲಿ ಬಸ್ಸುಗಳ ಸಾಗಾಣಿಕೆ ಕೆಲಸವನ್ನು ಕೈಕೊಂಡರೆ ಮಾತ್ರ ಕಾರ್ಪೊರೇಷನ್ ಆದಾಯವನ್ನು ಉತ್ತಮ ರೀತಿಯಲ್ಲಿ ಸಾಧ್ಯವಾಗುತ್ತದೆ. ಅದನ್ನು ರಾಷ್ಟ್ರೀಕರಣ ಮಾಡಬೇಕೆಂದು ನಾನು ಹೇಳುವುದಿಲ್ಲ. ಪ್ರೈವೇಟ್ ದರಂಗಳಿಗೆ ಅವಕಾಶ ಮಾಡಬೇಕು. ನಾನ್ ಟ್ಯಾಕ್ಸ್ ರೆವೆನ್ಯೂ ಬಹಳ ಕಡಮೆಯಾಗಿರುವುದಕ್ಕೆ ಕಾರಣ ಅಧ್ಯಕ್ಷತೆ ಬಹಳವಾಗಿರುವುದು.

ಕೈಗಾರಿಕೆಗಳಲ್ಲಿ ಉನ್ನತ ಹುದ್ದೆಯಲ್ಲಿರುವ ಮೇಲ್ಪಟ್ಟ ಅಧಿಕಾರಿಯನ್ನು ಅಗಾಗ್ಯೆ ವರ್ಗ ಮಾಡಿದರೆ ತೊಂದರೆಯಾಗುವುದು, ಅದೇ ತಾಸಿಲ್ದಾರರನ್ನು ವರ್ಗ ಮಾಡಿದರೆ ಬೇರೆಯವರು ಅವರ ಜಾಗಕ್ಕೆ ಬಂದರೆ ಅವರು ಎರಡು ಮೂರು ದಿವಸಗಳಲ್ಲಿ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ. ಕೈಗಾರಿಕೆಗಳಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಉನ್ನತ ಅಧಿಕಾರಿ ಸರಿಯಾಗಿ ಕೆಲಸ ಮಾಡಿದರೆ ಉಪಯೋಗವಾಗುತ್ತದೆ, ಇಲ್ಲದಿದ್ದರೆ ಮಾಡಾನ್ ಪುಷೀನರಿ ತಂದರೂ ಪ್ರಯೋಜನವಾಗುವುದಿಲ್ಲ. ನಮ್ಮ ಉಕ್ಕಿನ ಕಾರ್ಖಾನೆಯಲ್ಲಿ ಕೆಲಸಗಾರರ ಸಂಖ್ಯೆ ಜಾಸ್ತಿ, ಟಾಟಾ ಕಂಪೆನಿಯಲ್ಲಿರುವುದಕ್ಕಿಂತ ಹೆಚ್ಚು ಖರ್ಚು ಜಾಸ್ತಿ, ಅನಾವಶ್ಯಕವಾಗಿ ಆಗುತ್ತಿದೆ, ಇಂಥಾದ್ದು ಬಹಳವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. Wasteful expenditure ಕಡಮೆ ಮಾಡುವ ನೂತನ ಕಾರಣುವುವಿಲ್ಲ. ಹೊಸ ಹುದ್ದೆಗಳನ್ನು ಸೃಷ್ಟಿಮಾಡಲಾಗುತ್ತಿದೆ. ಪ್ರತಿ ಸಲವೂ ಒಂದು ಹೊಸ ಯೋಜನೆ ಕೈಕೊಂಡು ಹೊಸ ಹುದ್ದೆಗಳನ್ನು ಸೃಷ್ಟಿಮಾಡುತ್ತಿದ್ದಾರೆ. ಹತ್ತಾರು ವರ್ಷಗಳಲ್ಲಿ ಹುದ್ದೆಗಳಿಗಾಗಿ ಆಗುತ್ತಿರುವ ಖರ್ಚು ಎಷ್ಟು ದೂರ ಹೋಗಿದೆ ಎಂಬುದು ಗೊತ್ತಾಗಿದ್ದರೆ ಚೆನ್ನಾಗಿತ್ತು. ಮಿತವ್ಯಯ ಮಾಡುತ್ತಿರುವುದು ಕಂಡು ಬರುವುದಿಲ್ಲ. ಮಿತವ್ಯಯಮಾಡುವುದಾಗಿ ಹೇಳುವುದು ಕಾರ್ಯರೂಪಕ್ಕೆ ಬಂದಂತೆ ಕಾಣುವುದಿಲ್ಲ. Vested interest ಇರುವುದರಿಂದ ಅದನ್ನು ಮಾಡುತ್ತಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಖರ್ಚಿದೆ, ಇದು ಲೋಕಕ್ಕೆ ಉಪಯೋಗವಾಗುವ ಶಾಖೆ. ಈ ಇಲಾಖೆ ಕೆಲಸಗಳನ್ನು ಏಕೆ ಕಂಟ್ರಾಕ್ಟರುಗಳ ಮೂಲಕ ಮಾಡಿಸಬೇಕು? ಎ. ಜಿ. ಆರ್. ಕಮಿಟಿಯವರು ಇದಕ್ಕಾಗಿ ಸ್ಟಾಟ್ಯೂಟರಿ ಕಾರ್ಪೊರೇಷನ್ ಮಾಡಬೇಕೆಂದು ತಿಳಿಸಿದರು. ಹಾಗೆ ಮಾಡಬಹುದಾಗಿತ್ತು. ಕೇಂದ್ರ ಸರಕಾರ ಹಾಗೆ ಮಾಡುವಾಗ ರಾಜ್ಯ ಸರಕಾರವೇಕೆ ಮಾಡಬಾರದು? ಚೀಫ್ ಎಂಜಿನಿಯರಿಗೆ ಹಾಗೆ ಮಾಡುವುದು ಇಷ್ಟವಿಲ್ಲ, ಇಂಜನಿಯರಿಂಗ್ ಇಲಾಖೆಗೆ ಇಷ್ಟವಿಲ್ಲ. ಕಂಟ್ರಾಕ್ಟರು ಇರಲೇಬೇಕು. ಇದರಲ್ಲಿ ಪಟ್ಟಭದ್ರ ಹಿತವಿದೆ. ಕಂಟ್ರಾಕ್ಟರಿಗೆ ಇಂಜನಿಯರಿಂಗ್ ಇಲಾಖೆಯವರು ಬೇಕು, ಇಲಾಖೆಯವರಿಗೆ ಕಂಟ್ರಾಕ್ಟರು ಬೇಕು. ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡುವಾಗ ಅದಕ್ಕೆ ತಕ್ಕ ಸರ್ವಿಸ್ ಕೊಡಬೇಕು. ಉತ್ಪತ್ತಿಯೂ ಹೆಚ್ಚಬೇಕು, ದಕ್ಷತೆಯೂ ಹೆಚ್ಚಬೇಕು. ಸಾಕಷ್ಟು ಉತ್ಪತ್ತಿ ಇಲ್ಲದಿದ್ದರೆ ಯಾವ ಇಲಾಖೆಯೂ ಕೂಡ ಉಳಿಯುವುದಿಲ್ಲ. ದಕ್ಷತೆ ಕಡಮೆಯಾಗಿರುವಾಗ ಸಲಹೆ ಏನು ಕೊಟ್ಟರೆ ತಾನೆ ಪ್ರಯೋಜನವಾದೀತು? Mass drive ಇದ್ದರೆ ಸುಧಾರಣೆ ಸಾಧ್ಯವಾದೀತು, ಅದಿಲ್ಲ. Mass efficiency ಇಲ್ಲ. 10 ವರ್ಷಗಳಿಂದ ಇದನ್ನು ಹೇಳುತ್ತಿದ್ದೇವೆ, ಮಂತ್ರಿಗಳು ಪ್ರವಾಸ ಹೋದರೆ ನೋಟ್ಸ್ ತಯಾರುಮಾಡಬೇಕೆಂದು ಹೇಳುತ್ತಿದ್ದೇವೆ. ಆದರೆ ಇದುವರೆಗೆ ಅದನ್ನು ಮಾಡಿದಂತೆ ಕಾಣುವುದಿಲ್ಲ. ಮಾನ್ಯ ಶೆಟ್ಟರು ಹೇಳಿದಹಾಗೆ ದೊಡ್ಡ ಸುಧಾರಣೆ ಮಾಡುವುದು ಬೇಡ, ಎಲಿಮೆಂಟರಿ ಥಿಂಗ್ಸ್ ಆಗದಿದ್ದರೆ ಏನು ಪ್ರಯೋಜನ?

ಇನ್ನು ಪೋಲೀಸು ಖಾತೆಗೆ ಹೆಚ್ಚು ಹೆಚ್ಚಾಗಿ ಖರ್ಚು ಮಾಡುವುದಕ್ಕೆ ಕಾರಣವೇನು, ಹಾಗೆ ಮಾಡುವುದು ನ್ಯಾಯವೇ, ಸಾಧುವೇ ಎಂದು ಪ್ರಶ್ನೆ ಮಾಡುತ್ತೇನೆ. ಈಗ ಸುಮಾರು 7 ಕೋಟಿ ರೂಪಾಯಿ ಖರ್ಚಿದೆ, ಒಟ್ಟು ಅಡ್ಮಿನಿಸ್ಟ್ರೇಟಿವ್ ಸರ್ವಿಸಸ್‌ಗೆ 16 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಲಾಗುತ್ತಿದೆ. ಅದರಲ್ಲಿ ಪೋಲೀಸು ಇಲಾಖೆಗೆ 1968-69ಕ್ಕೆ 7 ಕೋಟಿ ರೂಪಾಯಿ ತೆಗೆದಿರಿಸಿದೆ. ಇದು ಪ್ರೊಗ್ರೆಸಿವ್ ಎಕ್ಸ್‌ಪೆಂಡಿಚರೇ ? ಕಳೆದ ಸಾಲಿನಲ್ಲಿ 6 ಕೋಟಿ ಚಿಲ್ಲರೆ ಇತ್ತು. ಅದರ ಹಿಂದಿನ ಸಾಲಿನಲ್ಲಿ 5 ಕೋಟಿ ಇತ್ತು. ಈಗ ಸುಮಾರು ನೇಕಡ 16 ರಷ್ಟು ಖರ್ಚು ಪೋಲೀಸು ಇಲಾಖೆಯಲ್ಲಿ ಹೆಚ್ಚಾಗಿದೆ. ಪಾನನಿರೋಧವನ್ನು ಕಿತ್ತುಹಾಕುತ್ತೇವೆ ಎಂದು ಹೇಳುತ್ತೀರಿ, ಆವರ ಕೆಲಸ ಕೂಡ ಕಡಮೆ ಆಗಬೇಕಲ್ಲಾ ! ಪೋಲೀಸ್ ಅಮೆನ್‌ಸ್ಟೇಷನ್‌ಗೆ ಇದ್ದ ಬಹಳ ದೊಡ್ಡ ತೊಂದರೆ, ಅವರಿಗೆ ಇದ್ದ ಒಂದು ದೊಡ್ಡ ಕೆಲಸ ಅಂದರೆ ಈ prohibition offences ನಿಂದ maximum number ಕೊಲೆ, ವ್ಯಾಜ್ಯ ಆಗುತ್ತಾ ಇದ್ದುದು, ಇದರಿಂದಲೇ. ಇದರಿಂದ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ ಎಂದು ಹೇಳುತ್ತಾ ಇದ್ದೇವೆ. If there is a case for reduction in expenditure in any department, it is the police Department, because some of their primary responsibilities have been taken away from them.

12-30 P.M.

ಪಾನನಿರೋಧ ಕಿತ್ತು ಹಾಕಿದ ಮೇಲೆ ಅವರಿಗೆ ಹೊಸ ಜವಾಬ್ದಾರಿಯನ್ನೇನೂ ಕೊಡುತ್ತಾ ಇಲ್ಲ. ಆದ್ದರಿಂದ ಕೆಲಸಕ್ಕೆ ತಕ್ಕಂತೆ, ಹೂಣಿಗಾರಿಕೆಗೆ ತಕ್ಕಂತೆ ಖರ್ಚು ಮಾಡಬೇಕೆಂಬ ನೀತಿ ನಿಯಮಕ್ಕೆ ನಮ್ಮ ಸರ್ಕಾರದವರು ಕಟ್ಟು ಬಿದ್ದಿದ್ದರೆ ಇವತ್ತು ಅದರಲ್ಲಿ ಖರ್ಚು ಕಡಮೆ ಆಗಬೇಕಾಗಿತ್ತು. ಅವರ ಜೊತೆಗೆ ಎಕ್ಸೈಜ್ ಡಿಪಾರ್ಟ್‌ಮೆಂಟು ಬೇರೆ. ಸಿಬ್ಬಂದಿ ಏಕೆ ಜಾಸ್ತಿ ಆಯಿತು ? Is it for an inefficient service ? ರಾ ಅಂಡ್ ಆರ್ಡರ್ ವಿಷಯದಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಾ ಇದ್ದೀರಾ ? ಮುಂಜಾಗರೂಕತೆಯ ಕ್ರಮಗಳನ್ನು ಸಾಧಿಸಲಿಕ್ಕೆ ಸಾಕಾದಷ್ಟು ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟು ನಿಮ್ಮಲ್ಲಿ ಇಲ್ಲ. ಅಷ್ಟೆರ್ಲಾ ಇದ್ದಿದ್ದರೆ ಈ ಹಿಂದಿ ಬಳುವಳಿ ಇರುತ್ತಾ ಇರಲಿಲ್ಲ. ಕಾಲೇಜಿನ ಮುಂದೆ ಹುಡುಗರು ಗುಂಪುಕೂಡದೇ ಇದ್ದಿದ್ದರೆ ಅವರು ಕಲ್ಲು ಹೊಡೆಯುತ್ತಲೇ ಇರಲಿಲ್ಲ, ಪೋಲೀಸರು ಪಿನಿಪಾಲರನ್ನು ಹೊಡೆಯುತ್ತಾ ಇರಲಿಲ್ಲ. ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ಇಷ್ಟೊಂದು ದುಡ್ಡು ಖರ್ಚು ಮಾಡುತ್ತಾ ಇದ್ದೇವೆ. Organised community like the students ಇರುವಾಗ ಹಿಂದಿ ಬಗ್ಗೆ ಕಲ್ಪನೆ ಸರ್ಕಾರಕ್ಕೆ ಮುಟ್ಟಿಸುವಷ್ಟಕ್ಕೆ ಯೋಗ್ಯತೆ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ಇಲ್ಲ ಎಂದರೆ ಅದು ಇದ್ದು ತಾನೆ ಏನು ಪ್ರಯೋಜನ ? ಬೆಂಗಳೂರು ಸಿಟಿಯಲ್ಲೇ ಹೀಗಾದರೆ ಬೇರೆ ಕಡೆ ಇನ್ನು ಹೇಗೆ ಇರಬೇಕು ? ಅದರ ಮಾತು ಇರಲಿ. 20 ವರ್ಷದ ಹಿಂದೆ ಎಷ್ಟೋ ವಿಚಾರಗಳನ್ನು ತಿಳಿದುಕೊಂಡು ಮುಂಜಾಗರೂಕತೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದರು. ಇವತ್ತು ನಿಮಗೂ ಸಹ ಗೊತ್ತಾಗಲಿಲ್ಲ, ನಾವು ಹೇಳಿದ ಮೇಲೆ ಇಲ್ಲಿ ರೆಜಿಸ್ಟ್ಲೇಚರ್‌ನಲ್ಲಿ ಚರ್ಚೆಯಾದ ಮೇಲೆ ಎಷ್ಟೋ ವಿಷಯಗಳು ನಿಮಗೆ ಗೊತ್ತಾಗುತ್ತವೆ. ನಿಜವಾಗಿಯೂ ಬೆಂಗಳೂರು ಸಿಟಿಯಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಮುನ್ನೆಚ್ಚರಿಕೆ ತೆಗೆದುಕೊಂಡಿದ್ದರೆ ವಿದ್ಯಾರ್ಥಿಗಳ ಗಲಾಟೆ ಆಗುತ್ತಾ ಇರಲಿಲ್ಲ. ನಾವೇನಾದರೂ ಟೀಕೆ ಮಾಡಿದರೆ ಲ್ಯಾಂಪ್ ಪೋಸ್ಟ್ಸು ಒಡೆದರು, ಅನ್ಯಾಯವಾಗಿದೆ ಅಂತ ಬಾದ ಮಾಡಿದರೆ ನಿಮಗೆ ಒಂದು ರೀತಿಯಲ್ಲಿ ಅದು ಟೀಕೆ ಮಾಡಿದಹಾಗೆ ಕಾಣುತ್ತದೆ. ನನಗೆ ತಿಳಿದ ಹಾಗೆ ಬೆಂಗಳೂರಿನಲ್ಲಿ ಇದಕ್ಕಿಂತಲೂ ದೊಡ್ಡ ಡೆಮಾನ್‌ಸ್ಟ್ರೇಷನ್ಸ್ ಆಗಿವೆ. It has been only very careful and peaceful one ಇಂಟೆಲಿಜೆನ್ಸ್ ಬೇಕು, ದಕ್ಷತೆ ಬೇಕು. ಅದರ ವಿಷಯ ಹೆಚ್ಚಾಗಿ ಹೇಳಬೇಕಾಗಿಲ್ಲ.

ಇನ್ನೊಂದು ವಿಷಯ. ಕೈಗಾರಿಕೆಗಳ ಬಗ್ಗೆ ಹೊರಗಿನಿಂದ ಬಂಡವಾಳ ಹೆಚ್ಚಾಗಿ ತರಿಸುತ್ತ ಇದ್ದೇವೆ. ಹೊರಗಿನಿಂದ ಕೈಗಾರಿಕೋದ್ಯಮಿಗಳನ್ನು ಆಹ್ವಾನ ಮಾಡುತ್ತಾ ಇದ್ದೇವೆ. ರಾಮಕೃಷ್ಣ ಹೆಗಡೆಯವರು ವಿದೇಶ ಪರ್ಯಟನೆ ಮಾಡಿದ ನಂತರ ವರದಿ ಕೊಡಬೇಕಾಗಿತ್ತು. ಇದರಲ್ಲಿ ಇರುವುದು ಏನೆಂದರೆ hopes. ಮಾನ್ಯ ಕೆ. ಕೆ. ಶೆಟ್ಟರು ಹೇಳಿದಹಾಗೆ ಎಲ್ಲಕ್ಕೂ hopes, ಯಾವುದು ತೆಗೆದುಕೊಂಡರೂ hope ಇದ್ದೇ ಇರುತ್ತದೆ. ಒಂದು ಉದಾಹರಣೆ ಕೊಡುತ್ತೇನೆ. What happened yesterday is that one leading gentleman told me that he had come to investigate and inspect here. 1964—65ರಲ್ಲಿ ಮೈಸೂರು ಫ್ರೂಟ್ ಫ್ಯಾಬ್ರಿಕ್ಸ್ ಅಂತ ಮೋಹನ್ ಮೆಕಿನ್ಸ್ ಅನ್ನುವಪರಿಗೆ 6 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದೀರಿ,

(SRI M. C. NARASIMHAN)

ಅವರು ಪೈನ್ ಮಾಡುತ್ತಾರೆ ಮತ್ತು ಇತರ ಶಬ್ದಗಳು ಇತ್ಯಾದಿ ಫುಡ್ ಪ್ರಾಡಕ್ಟ್ಸ್ ಮಾಡುತ್ತಾರೆ, ದೊಡ್ಡ ಪ್ರಮಾಣದಲ್ಲಿ ಉಪಯೋಗವಾಗುತ್ತದೆ ಎಂದು ತಿಳಿದುಬಂದಿತು. ನಿನ್ನೆದಿವಸ ಬೋರ್ಡ್ ಆಫ್ ಡೈರೆಕ್ಟರ್ಸ್ ಏನು ತೀರ್ಮಾನ ಮಾಡಿದ್ದಾರೆ ಎಂದರೆ, ಅದರಲ್ಲಿ ಶ್ರೀಮಾನ್ ವೆಂಕಾಜಿರಾಯರೂ ಇದ್ದಾರೆ ಎಂದು ಕಾಣುತ್ತದೆ, ಸರ್ಕಾರದವರು ಸಹಾಯ ಕೊಡಬೇಕು ಇರುವುದರಿಂದ ಫ್ಯಾಕ್ಟರಿಯನ್ನು ಮುಚ್ಚಬೇಕೆಂದು ತೀರ್ಮಾನ ಮಾಡಿದ್ದಾರೆ, ಅಲ್ಲಿರತಕ್ಕ ಕೆಲಸಗಾರರಿಗೆ ಇವತ್ತು ನಾಳೆಯಿಂದ ಕೆಲಸ ಇಲ್ಲ ಅಂತ ಹೇಳಿದ್ದಾರೆ. 6 ಲಕ್ಷ ರೂಪಾಯಿ ರೆಡಿ ಕ್ಯಾಷ್ ಕೊಟ್ಟಿದೀರಿ, deferred payment ಕೂಡ ಇಲ್ಲ, 1965ರಿಂದ ಇಲ್ಲಿಯವರೆಗೂ ಅಪಾರ್ಟ್‌ಮೆಂಟ್‌ಗಳು 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೆಷಿನರಿ ಕೊಂಡುಕೊಂಡಿದ್ದಾರೆ. ಅವರಿಗೆ ತೀರಿಸಿದ ಜಮೀನನ್ನು ಕೊಂಡುಕೊಂಡಿದ್ದಾರೆ. ನೀವು ಎಲ್ಲಿ ಫ್ಯಾಕ್ಟರಿ ಹಾಕಬೇಕೆಂದು ಹೇಳಿದಿರೋ ಅಲ್ಲಿ ಹಾಕಿದರು. ಅಲ್ಲಿ ನಷ್ಟವಿದ್ದು ಎರಡೇ ಎರಡು ಕಾರ್ಯ: ಬಾಟ್ಲಿಂಗ್ ಲೈಸೆನ್ಸ್ ಒಂದು, ಎರಡನೆಯದು ಪೈನ್ ಮಾಡುವುದು. ನಮ್ಮ ಈ ದೇಶದಲ್ಲಿ ಎಷ್ಟು ಜನ ಪೈನ್ ಕೊಂಡು ಕೊಳ್ಳುತ್ತಾರೋ ಖಂಡಿತ ನಮಗಂತೂ ಗೊತ್ತಿಲ್ಲ. ನಮಗೆ ಗೊತ್ತಿರುವ ಹಾಗೆ ಬಹಳ ಕಡಿಮೆ ಜನ. ಕೆಳಮನೆ ಸದಸ್ಯರು ಶ್ರೀಮಾನ್ ಬೈರೇಗೌಡರು ಹೇಳುತ್ತಾ ಇದ್ದರು—ಹೊರದೇಶಗಳಿಗೆ—ಫ್ರಾನ್ಸ್‌ಗೆ ರಫ್ತು ಮಾಡುತ್ತೇವೆ ಎಂದು. ಅವರಿಗೆ ಬಹಳ ಚೆನ್ನಾಗಿರುತ್ತದೆ ಎಂದು ಕಾಣುತ್ತದೆ, ಇಲ್ಲಿಂದ ಹಾಗೆ ಹೋಗುವಾಗ ಸಾಗಿಸುವಾಗ ಖರ್ಚಾಗುತ್ತದೆ. ಪೈನ್ ಪ್ರಾಡಕ್ಟ್ ಜೊತೆಗೆ ಇನ್ಸ್ಯುಲೇಟರ್ಸ್ ಮಾಡುವುದಕ್ಕೂ ಅವಕಾಶ ಕೊಟ್ಟಿರಬೇಕಾಗುತ್ತದೆ, ಕೊಡುತ್ತೇವೆ ಎಂದು ಮಾತುಕತೆಯಾಗಿತ್ತು, ಇದು ಶ್ರೀಮಾನ್ ವೆಂಕಾಜಿ ರಾಯರಿಗೂ ಗೊತ್ತಿದೆ. ಇವತ್ತು ಮೂರು ವರ್ಷದಿಂದ ಅಲೆಯುತ್ತಾ ಇದ್ದಾರೆ. ಮುಖ್ಯಮಂತ್ರಿಗಳನ್ನು ಕಂಡಾಗಲೆಲ್ಲಾ 'ನಾಳೆ ಆಗುತ್ತದೆ ನಡೀರಿ' ಅಂತ ಹೇಳುತ್ತಾ ಇದ್ದರಂತೆ. ಅವರು ಯಾವಾಗಲೂ ಯಾವ ವಿಷಯದಲ್ಲೂ ಹೀಗೆಯೇ. Many a time he does not mean what he says and many a time, he does not do what he meas also. ಈ ಮೋಹನ್ ಎಕನ್ಸ್ ರೆಪ್ರಸೆಂಟೇಟೀವ್‌ಗೆ ಈ ರೀತಿ ನಾಳೆ ಆಗುತ್ತದೆ ಎಂದು ಹೇಳಿದ್ದಾರೆ. ನಾಳೆ ನಾಳೆ ಅಂತ ಹೇಳಿ ಮೂರು ವರ್ಷ ಆಯಿತು. ಬಾಟ್ಲಿಂಗ್ ಲೈಸೆನ್ಸೂ ಇಲ್ಲ. ಮುಚ್ಚುವುದಕ್ಕೆ ತೀರ್ಮಾನ ಮಾಡಿದ್ದಾರೆ. Sir, he is one of the leading entrepreneurs in the Country, he is one of the best men, so far as labour relationship is concerned and so far as I know.

ಅವರೂ ಕೂಡ ನಮಗೆ ಲೈಸೆನ್ಸ್ ಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ, ಇನ್ನೆರಡು ದಿವಸಗಳಲ್ಲಿ ಕೊಟ್ಟೇ ಬಿಡುವುದಾಗಿ ಹೇಳಿದ್ದಾರೆಂದು ಹೇಳುತ್ತಿದ್ದರು. ಅದೇ ರೀತಿ ಈಗ ಈ ಉದ್ಯಮದವರಿಗೆ ಮಹಾರಾಷ್ಟ್ರದವರಿಗೆ ಲೈಸೆನ್ಸ್‌ನ್ನು ಕೊಟ್ಟಿದ್ದಾರೆಂದು ಕೇಳುತ್ತೇನೆ. ಮಹರಾಷ್ಟ್ರದವರಿಗೆ ಅವರ ದೇಶದ ಮೇಲೆ ಹೆಚ್ಚು ಅಭಿಮಾನವಿತ್ತು. ಆದುದರಿಂದ ಆ ಸರ್ಕಾರದವರು ತಮ್ಮ ದೇಶದಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಲು ಅವರು ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಬಹುಶಃ ಉತ್ತರ ಭಾರತದಿಂದ ಬರತಕ್ಕ ಜನರಿಗೇ ಕೆಲ ಇಲ್ಲ ಉತ್ತೇಜನ ಕೊಡಬೇಕು ಅನ್ನುವ ಮನೋಭಾವವನ್ನು ನಮ್ಮ ಸರ್ಕಾರದವರಿಟ್ಟುಕೊಂಡಿರುವ ಹಾಗೆ ಕಾಣುತ್ತಿದೆ. ಇದನ್ನು ತಿಳಿದೇ ಅವರು ನಾವೇಲೆ ಇವರಲ್ಲಿ ವ್ಯರ್ಥ ಬಡಿದಾಡಬೇಕು ಎಂದು ಹೇಳಿ ಅವರು ಆ ಕೈಗಾರಿಕೆಯನ್ನು ಇಲ್ಲಿ ಮುಚ್ಚಿಬಿಟ್ಟರು. ಈ ವಿಷಯ ನನಗೆ ಹೇಗೆ ಗೊತ್ತಾಯಿತು ಎಂದರೆ, ಅವರು ಅಲ್ಲಿ ತಮ್ಮ ಎಸ್ಟಾಬ್ಲಿಷ್‌ಮೆಂಟನ್ನು ಮುಚ್ಚುತ್ತೇವೆಂದು ಹೇಳಿದಾಗ ಅವರು ಆ ನೌಕರರಿಗೆ ಕೊಡತಕ್ಕ ಆಕಾಂಪನ್‌ಸೇಷನ್ ಬಗ್ಗೆರೆ ಕೊಡುತ್ತಾರೋ ಇಲ್ಲವೋ ಅನ್ನತಕ್ಕ ಒಂದು ಜಿಜ್ಞಾಸೆಗೆ ಇಟ್ಟುಕೊಂಡಿದ್ದರಿಂದ ನನಗೆ ಆ ವಿಷಯ ಗೊತ್ತಾಯಿತು. ನಮ್ಮಲ್ಲಿ ಪಾನಿರೋಧವನ್ನು ತೆಗೆಯುವುದಕ್ಕೆ ಮೊದಲೇ ಇಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ನಮ್ಮಲ್ಲಿಗೆ ಇಂಥಾ ಒಂದು ಕೈಗಾರಿಕೆಯನ್ನು ಪ್ರಾರಂಭಿಸಲು ಹೊರಗಿನ ಜನರು ಬರುತ್ತಾರೆ, ಅಂಥ ಹಿಂದು ನಿರೀಕ್ಷೆಣೆ ಇಟ್ಟುಕೊಂಡಿದ್ದೇವೆಂದು ಹೇಳುತ್ತಿದ್ದರು. ಆದರೆ ಇಲ್ಲಿ ಬಾಟ್ಲಿಂಗಿಗೆ ನಮ್ಮಲ್ಲರತಕ್ಕ ಆಕ್ಟಿನ ಪ್ರಕಾರ ಲೈಸೆನ್ಸ್ ಪಡೆಯಬೇಕು. ಅವರು ಇಲ್ಲಿಗೆ ಬಂದಮೇಲೆ ನಮ್ಮ ಸರ್ಕಾರ ಅವರಿಗೆ ಇಂಥ ಇಕ್ಕಟ್ಟನ್ನು ಕೊಟ್ಟರೆ ಇವರು ಏನೇ ಪ್ರಚಾರ ಮಾಡಿದರೂ ಹೊರಗಿನ ಜನರು ಇಲ್ಲಿಗೆ ಹೇಗೆ ಬರುತ್ತಾರೆ? ಬಂದವರಿಗೇನು ಉತ್ತೇಜನ ಇವರು ಕೊಟ್ಟಿದ್ದಾರೆ? ಹೋಗಲಿ, ಹೊರಗಿನವರೇನೂ ಬಾರದೇಕಾದದ್ದಿಲ್ಲ ಅನ್ನೋಣ ಅಂದರೆ, ಇಲ್ಲಿಯ ಜನರಲ್ಲಿ ಅಷ್ಟು ಹಣವಿಲ್ಲ. ಇಲ್ಲಿಯವರಲ್ಲಿ ಕೈಗಾರಿಕೆಯನ್ನು ಬೆಳೆಸಲು ಬಂಡವಾಳವಿಲ್ಲ—ಹೊರಗಿನಿಂದ ಬರತಕ್ಕ

ವರಿಗೆ ಉತ್ತೇಜನವಿಲ್ಲ. ಇನ್ನು ಪ್ರೇಷರ್‌ಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು ಅಂದರೆ ಹೇಗೆ? ಜನರಿಗೆ ಕೂಲಿ ಡುಡಿಯಲು ಅವಕಾಶವೆಲ್ಲಿದೆ? ನಮ್ಮ ರಾಜ್ಯದಲ್ಲಿ ಫೈನಾನ್ಷಿಯರ್ ಕಾರ್ಪೊರೇಷನ್ ಅಂತ ಮಾಡಿದರು. ಇವರಾದರೂ ಇಲ್ಲಿಯ ಕೈಗಾರಿಕೆಗಳ ಬಗ್ಗೆ ಏನು ಉತ್ತೇಜನ ಕೊಟ್ಟಿದ್ದಾರೆ? ನಮ್ಮಲ್ಲಿ ಈ ಕಾರ್ಪೊರೇಷನ್ ಸ್ಥಾಪನೆಯಾದ ಎಷ್ಟೋ ದಿನಗಳ ಮೇಲೆ ಆಂಧ್ರ ಮತ್ತು ಆ ಮದ್ರಾಸ್ ರಾಜ್ಯಗಳಲ್ಲಿ ಈ ಫೈನಾನ್ಷಿಯರ್ ಕಾರ್ಪೊರೇಷನ್‌ಗಳು ಸ್ಥಾಪನೆಯಾದವು. ಆದಾಗ್ಯೂ ಅಲ್ಲಿ ಆ ಸಂಸ್ಥೆಗಳು ನಮ್ಮ ರಾಜ್ಯಕ್ಕಿಂತ ಹೆಚ್ಚು ಹಣವನ್ನು ಉದ್ದಿಮೆಗಳಿಗೆ ಹಂಚಿದ್ದಾರೆ. ಸ್ಟೇಟ್ ಫೈನಾನ್ಷಿಯರ್ ಕಾರ್ಪೊರೇಷನ್ನಿಗೆ ಸ್ವಾಚೂಜರಿ ರೂಲ್ಸ್‌ಗಳಿವೆ. ಹಾಗಿದ್ದಾಗ್ಯೂ ಇಲ್ಲಿ ನಮ್ಮ ಮಿನರ್ವಾ ಮಿಲ್ಲಿಗೆ ಸಹಾಯ ಕೊಡತಕ್ಕ ವಿಚಾರದಲ್ಲಿ ಅವರು ಅಸೆಟ್ಸ್‌ನ್ನು ಇನ್‌ಪೆಸ್ಟಿಗೇಟ್ ಮಾಡುವುದಕ್ಕೇನೇ ಇವರು ಆರು ತಿಂಗಳ ಕಾಲವನ್ನು ತೆಗೆದುಕೊಂಡರೂ ಅದು ಅಲ್ಲಿಗೂ ಮುಗಿಯಲೇ ಇಲ್ಲ. ಇವರು ಕಾಗದದ ಮೇಲೆ ಬರಿ ಒಂದು ಅಪ್ಲಿಕೇಷನ್ನು ಕೊಟ್ಟರೇನು ಸಾರ್ಥಕ? ಕಾಗದದ ಮೇಲೆ ಸಕ್ಕರೆ ಎಂದು ಬರೆದುಕೊಟ್ಟಿದ್ದನ್ನು ನೆಕ್ಕಿದರೆ ಅದರಲ್ಲೇನು ರುಚಿಯಿದೆ? ಇನ್ನು ಆ ರೆಯಾನ್ಸ್ ಫ್ಯಾಕ್ಟರಿಗೆ ಅಂದರೆ ರೆಯಾನ್ಸ್ ನ್ಯಾಷನಲ್ ಪೇಪರ್ ಮಿಲ್ಲಿಗೆ ಕಳೆದ ವರ್ಷ ಸಹಾಯ ನೀಡುತ್ತೇವೆ ಎಂದು ಹೇಳುತ್ತಿದ್ದರು. ಈ ವರ್ಷ ಅದರ ಸುದ್ದಿ ಕೂಡ ಇಲ್ಲ.

ಇಷ್ಟೆಲ್ಲವನ್ನೂ ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇಲ್ಲಿಗೆ ಹೊರಗಿನವರು ಬಂದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಅವರಿಗೆ ತಕ್ಕ ವಾತಾವರಣವನ್ನು ಇಲ್ಲಿ ಕಲ್ಪಿಸುತ್ತಿಲ್ಲ ಅನ್ನುವುದನ್ನು ಈ ಸಭೆಗೆ ಮನವರಿಕೆ ಮಾಡಿಕೊಡಲು ಹೇಳಬೇಕಾಯಿತು. ಇನ್ನು ನಮ್ಮ ಸರ್ಕಾರದವರೇ ಎಲ್ಲ ಕೈಗಾರಿಕೆಗಳನ್ನೂ ನಡೆಸುವುದಕ್ಕೆ ತೆಗೆದುಕೊಂಡರೆ ಅವು ಹೇಗೆ ಮುಂದುವರಿಯುತ್ತವೆ? ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಅಧಿಕ ಪ್ರಮಾಣದಲ್ಲಿ ಬಂಡವಾಳಬೇಕು. ನಮ್ಮ ಸರ್ಕಾರ ಯಾವತ್ತೂ ಆರ್ಥಿಕ ಪರಿಸ್ಥಿತಿಯನ್ನೇ ಹೇಳುತ್ತಿರುತ್ತಾರೆ. ನನಗೆ ಗೊತ್ತಿರುವ ಹಾಗೆ ಇಂಜಿನಿಯರಿಂಗ್ ಕೈಗಾರಿಕೆ ಒಂದು ಮತ್ತು ಕಾಟನ್ ಟೆಕ್ಸ್‌ಟೈಲ್ಸ್ ಒಂದು, ಈ ಎರಡಕ್ಕೂ ಆರ್ಥಿಕ ಕ್ರೈಸಿಸ್ ಉಂಟಾಗಿ ರಿಸೆಷನ್‌ಗೊಳಗಾದವು. ಆದರೆ ಕೆಲವು ಮಾತ್ರ ಮುಂದಕ್ಕೆ ಬಂದಿವೆ. ಆದರೆ ಈ ದಿವಸ ಸರ್ಕಾರದವರ ಕೈಲಿರತಕ್ಕ ಕೆಲವು ಕೈಗಾರಿಕೆಗಳಲ್ಲಿ ಸಾಬೂನು ಕಾರ್ಖಾನೆ, ಗಂಧದ ಎಣ್ಣೆಯ ಕಾರ್ಖಾನೆ, ಎಲೆಕ್ಟ್ರಿಕ್ ಕಾರ್ಖಾನೆ ಮತ್ತು ಫೋರ್ಸಿಲೇನ್ ಕೈಗಾರಿಕೆ ಇಂಥ ಕೈಗಾರಿಕೆಗಳ್ಯಾವುವೂ ರಿಸೆಷನ್‌ಗೆ ಒಳಗಾಗಿಲ್ಲ, ಗುರಿಯಾಗಲಿಲ್ಲ. ಆದರೆ ಇವುಗಳಲ್ಲಿ ಸಾಕಷ್ಟು ಲಾಭವೂ ಕೂಡ ಬರುತ್ತಿಲ್ಲ. ಹಾಗಿದ್ದರೂ ಈ ದಿವಸ ನಮ್ಮ ರೇಷ್ಮೆ ಫ್ಯಾಕ್ಟರಿಯಲ್ಲಿ ಪ್ರೊಡಕ್ಷನ್ ಬಿದ್ದು ಹೋಗಿದೆ, ಪ್ರತಿ ಫಲ ಕಡಮೆಯಾಗಿದೆ. ನಷ್ಟ ಹೆಚ್ಚಾಗುತ್ತಿದೆ. ಆದರೆ ಅದನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಇನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಣ್ಣ ಕಾರುಗಳ ತಯಾರಿಕೆ ಬಗ್ಗೆ ಹೇಳುತ್ತಲೇ ಇದ್ದಾರೆ, ಅದಾಗಲಿಲ್ಲ. ನಮ್ಮ ರಂಕೋ ಫ್ಯಾಕ್ಟರಿ ಇದ್ದ ನಷ್ಟದಲ್ಲಿ ಕೆಲಸ ಮಾಡುತ್ತಿದ್ದರೂ, ಈ ನಷ್ಟಕ್ಕೆ ಕಾರಣವೇನೆಂದರೆ, ನಮ್ಮ ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಡತಕ್ಕ ಬಗ್ಗೆ ಅನುಸರಿಸುತ್ತಿರುವ ನೀತಿಯೇ ಈ ನಷ್ಟಕ್ಕೆ ಕಾರಣ. ಬಿರ್ಲಾರವರಿಗೆ ಇದೇ ರಂಕೋದಲ್ಲಿ ತಯಾರಾಗುತ್ತಿರುವ ಸಾಮಾನುಗಳನ್ನು ತಯಾರಿಸಲು ದೊಡ್ಡ ಪ್ರಮಾಣದಲ್ಲಿ ಅವರಿಗೆ ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಇದು ಯಾವ ನೀತಿಯೋ ನನಗೆ ಅರ್ಥವಾಗುತ್ತಿಲ್ಲ. ಈ ರೀತಿಯಾದರೆ ಇಲ್ಲಿ ನಮ್ಮ ಕೈಗಾರಿಕೆಗಳೂ, ಕಾರ್ಖಾನೆಗಳೂ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಾಗುತ್ತದೆಯೇ ಅವು ಹೇಗೆ ಅಭಿವೃದ್ಧಿ ಹೊಂದಲು ಸಾಧ್ಯವಿದೆ? ನನಗೆ ಇದೊಂದೂ ಅರ್ಥವಾಗುವುದಿಲ್ಲ.

ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳಾದರೋ ಅವು ಮನಾಪಲಿ ಇಂಡಸ್ಟ್ರಿಗಳು. ಅದಕ್ಕೆ ಮಾರುಕಟ್ಟೆ ಚೆನ್ನಾಗಿದೆ. ಹಾಗಿದ್ದೂ ಅವು ಬೆಳೆಯಲಿಲ್ಲ, ಅಭಿವೃದ್ಧಿ ಆಗಲಿಲ್ಲ ನಾನೇನು ಹೇಳಲಿ? ಕೇಂದ್ರದ ಕೈಗಾರಿಕೆಗಳೂ ಅಷ್ಟೇ. ರಾಜ್ಯದಲ್ಲಿರತಕ್ಕ ಕೈಗಾರಿಕೆಗಳು ಅಷ್ಟೇ. ಇವಕ್ಕೆಗಳಿಗೆ ಅಂಥ ಒಂದ ಕಾಂಪಿಟೆಷನ್ ಇತ್ತು. ಅದಕ್ಕೆ ಅವು ಲಾಭದಾಯಕವಾಗಿ ಕೆಲಸಮಾಡುವುದಕ್ಕಾಗಲಲ್ಲ ಅನ್ನುವಂಥ ಸ್ಥಿತಿಯಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.— ತಾವು ದಯವಿಟ್ಟು ಬಜೆಟ್ ಭಾಷಣದ, ಅಂದರೆ, ಅರ್ಥ ಸಚಿವರ ಬಜೆಟ್ ಭಾಷಣದ ಪುಟ 20-21 ನ್ನು ತೆಗೆದು ನೋಡಿದರೆ ಇಲ್ಲಿ ತಾವೀಗ ಹೇಳುತ್ತಿರುವು ದೊಂದೂ ಸರಿಯಾಗಿದ್ದು ಹಾಗೆ ಕಾಣುತ್ತಿಲ್ಲ. ಇಲ್ಲಿ ಸೋಪ್ ಫ್ಯಾಕ್ಟರಿಯಲ್ಲಿ 1964 ರಲ್ಲಿ 36 ಪರ್ಸೆಂಟ್ ಇನ್‌ಕಂ, 1965 ರಲ್ಲಿ 23 ಪರ್ಸೆಂಟ್ ಇನ್‌ಕಂ ಎಂದು ತಿಳಿಸಲಾಗಿದೆ.. ... ...

ಶ್ರೀ ಎಂ. ಸಿ. ನರಸಿಂಹನ್.—ನಾನು ಈಗ ಪ್ರಸ್ತಾಪ ಮಾಡುತ್ತಿರುವುದು ರಾಜ್ಯ ಸರ್ಕಾರ ದವರು ನಡೆಸುತ್ತಿರುವ ಫ್ಯಾಕ್ಟರಿಗಳ ವಿಚಾರವನ್ನು ಹೇಳುತ್ತಿದ್ದೇನೆ. ಅವು ಏನು ಉತ್ಪತ್ತಿಯನ್ನು ಮಾಡುತ್ತವೆ ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅವು ಗಳಿಸಿರತಕ್ಕ ಲಾಭವೇನೆಂಬುದು ಸಿಕ್ಕುತ್ತದೆ. ಆದರೆ ಶ್ರೀ ಮುರ್ಗಾರಾಧ್ಯರು ಯಾವುದೋ ವರ್ಷದಲ್ಲಿ ಯಾವುದೋ ಒಂದು ಕೈಗಾರಿಕೆ ಲಾಭ ಮಾಡಿದ್ದನ್ನು ಎತ್ತಿ ತೋರಿಸುತ್ತಿದ್ದಾರೆ. ಹಿಂದೆ ಮಹಾತ್ಮ ಗಾಂಧಿಯವರು ಕಾರ್ಮಿಕ ವರ್ಗಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಹೇಳುತ್ತಿದ್ದರು. ನಮ್ಮ ರಾಜ್ಯದಲ್ಲಿ ಜನರಿಗೆ ಬೇಕಾಗತಕ್ಕ ವಸ್ತುಗಳ ಉತ್ಪನ್ನ ಇವ್ಲೇ ಅವುಗಳನ್ನು ಹೆಚ್ಚುಮಾಡಬೇಕು ಎಂದು ಹೇಳುತ್ತಿದ್ದರು. ಅದನ್ನು ಕಾರ್ಮಿಕರ ಸಹಕಾರ ಪಡೆದು ಉತ್ಪನ್ನವನ್ನು ಹೆಚ್ಚಿಸಬೇಕು ಅನ್ನುವುದು ಅವರ ಉದ್ದೇಶ ವಾಗಿತ್ತು. ಹಾಗೆ ಅವರು ಹೇಳಿದುದಕ್ಕೆ ಅನುಗುಣವಾಗಿ ಈ ದಿವಸ ನಮ್ಮ ಸರ್ಕಾರ ನಡೆಯುತ್ತಿದೆ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರದವರು ಈ ದಿವಸ ಅಂಥ ಒಂದು ಸಹಕಾರವನ್ನು ನೀಡತಕ್ಕ ವಿಚಾರದಲ್ಲಿ ಮತ್ತು ಉತ್ಪನ್ನವನ್ನು ಹೆಚ್ಚಿಸತಕ್ಕ ವಿಚಾರದಲ್ಲಿ ಬಹಳ ಹಿಂದೆ ಬಿದ್ದಿದೆ ಎಂಬುದು ನಮಗೆಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ರಾಜ್ಯದಲ್ಲಿ ಕೂಲಿಗಾರರಿಗೆ ಕೊಡತಕ್ಕ ಕೂಲಿಗಳೆಲ್ಲಾ ಬಹಳ ಕಡಿಮೆ ದರದಲ್ಲಿವೆ. ಇಲ್ಲಿ ತಯಾರಾಗತಕ್ಕ ವಸ್ತುಗಳ Cost of production ಕೂಡ ಬಹಳ ಕಡಿಮೆ. ಆದರೆ ಇಲ್ಲಿ managerial inefficiency ಬಹಳ ಇದೆ. ಇದು ಇಲ್ಲಿನ ಕೈಗಾರಿಕೆಗಳಿಗೆ ಬಹಳ ಅಡ್ಡಿಯಾಗಿದೆ. ನಮ್ಮ ದೇಶದಲ್ಲಿ..... ಇತರ ದೇಶಗಳಲ್ಲಿ ಮ್ಯಾನೇಜ್‌ಮೆಂಟಿನವರು ತಮ್ಮ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಬಹಳ ದೂರ ಗಮನವನ್ನು ಕೊಡುತ್ತಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಅದಕ್ಕಾಗಿ ಕೊಡುತ್ತಿದ್ದಾರೆ. ಎಷ್ಟೋ ತನಿಖೆಗಳೂ ಕೂಡ ನಡೆಯುತ್ತಿವೆ. ರಿಸರ್ಚ್ ಸಹ ನಡೆಯುತ್ತಿದೆ. ನಿಮ್ಮಲ್ಲಿ ಅದು ಯಾವುದೂ ಇಲ್ಲ. ನಮ್ಮ ಸರ್ಕಾರದ ಅಧಿಕಾರಿಗಳು ಹೇಳಿದರೆ ಮಾತ್ರ ಮಾಡುತ್ತಾರೆ. ಕೆಲವರು ನರ್ವಜ್ಞರು ಎಂಬ ದೃಷ್ಟಿಯಿಂದ ಅವರ ಮನಸ್ಸಿಗೆ ಬಂದಂತೆ ಮಾಡುವುದೂ ಉಂಟು. ಕಾನೂನು ಗಳೂ ಸಹ ಅರೀತಿ ಇರುವುದರಿಂದ ಅವರು ಅರೀತಿ ನಡೆಯುತ್ತಿದ್ದಾರೆಂದು ಹೇಳಬಹುದು. ಅದನ್ನು ತಿದ್ದಲಕ್ಕೆ ಇವರ ಕೈಲಿ ಸಾಧ್ಯವಾಗಿಲ್ಲ. ಶ್ರೀ ಕಾಂತಪ್ಪಶೆಟ್ಟಿಯವರು ಹೇಳಿದಹಾಗೆ ಸೆಕ್ರೆಟೇರಿಯಟ್‌ನಲ್ಲಿಯೂ ಅಷ್ಟಾಗಿ ದಕ್ಷತೆ ಇಲ್ಲವೆಂಬುದನ್ನು ನಾನು ಸ್ವಲ್ಪಮಟ್ಟಿಗೆ ಒಪ್ಪಬೇಕಾಗಿದೆ. ಕೆಲವು ಖಾಸಗಿ ಕಂಪೆನಿಗಳಲ್ಲಿ ಎಷ್ಟೋ ದಕ್ಷತೆ ಇದೆ. ಆದರೆ ಸರ್ಕಾರದಿಂದ ನಡೆಯತಕ್ಕ ಕೆಲವು ಕಾರ್ಖಾನೆಗಳಲ್ಲಿಯೂ ಅಷ್ಟು ದಕ್ಷತೆ ಇಲ್ಲ. ಇನ್ನು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಹಾಗೂ ಇತರ ಕಂಪೆನಿಗಳಲ್ಲಿಯೂ ಕೂಡ ಇತ್ತೀಚೆಗೆ ದಕ್ಷತೆ ಕಾಣುತ್ತಿಲ್ಲ. ಇದೇ ಜನರು ಅಲ್ಲಿಗೂ ಹೋಗುವುದರಿಂದ ಎಲ್ಲಿ ದಕ್ಷತೆ ಬರುತ್ತದೆ? ದಕ್ಷತೆ ಅಲ್ಲಿ ಬರಬೇಕಾದರೆ ಕಾಂಗ್ರೆಸ್ ಪಕ್ಷದವರ ಜೊತೆಗೆ ಎಕ್ಸ್‌ರ್‌ಸೈಜ್ ಮಾಡುವಂಥ ಜನ ಸೇರಬೇಕು. ಎಲ್.ಐ.ಸಿ. ಅವರಲ್ಲಿ ನಮಗೆ ಒಂದು ಆಕಾಂಕ್ಷೆ ಇತ್ತು. They were not prepared to exercise autonomy. They were dictated by Sri T. T. Krishnamachari. ಅಟಾನಮಿ ಕೊಡುವುದೂ ಒಂದು ನಮಸ್ಯೆಯೆಂದು ಚಾಗರಾ ವರದಿಯಿಂದಲೇ ವ್ಯಕ್ತವಾಗುತ್ತದೆ. ರಾಜ್ಯಾಂಗದ ಕಾನೂನುಗಳಲ್ಲಿ ಕಾರ್ಮಿಕರಿಗೆ ಅನ್ವಯಿಸುವಂತಹ ಕಾನೂನುಗಳು ಸೂಕ್ತವಾಗಿ, ವ್ಯವಸ್ಥಿತಪೂರ್ವಕವಾಗಿ ಹಾಗೂ ಅಷ್ಟೊಂದು ತಪ್ಪಿಸಕರವಾಗಿ ಇಲ್ಲ. ಇದರಿಂದ ಈ ದೇಶದಲ್ಲಿ ಬಹಳ ದೊಡ್ಡ ಪೆಟ್ಟು ಕೊಟ್ಟಂತಾಗಿದೆ. ಇದರಲ್ಲಿ ರಿಸಿಷನ್ ಜಾಸ್ತಿ ಆದಂತಾಗಿದೆ. man days lost is on the increase ಇದರಲ್ಲಿ ಹೆಚ್ಚು ಕಾರ್ಮಿಕ ಶಕ್ತಿ ಬರುವುದಕ್ಕೆ ಏನೂ ಮಾಡಿಲ್ಲ. labour participation in the management has been given the go bye long back. ಮಾನ್ಯ ಶ್ರೀ ಕಾಂತಪ್ಪಶೆಟ್ಟಿಯವರು ಅವರ ಪಾರ್ಟಿಗೆ ಸೇರಿದ ಹಾಗೆ ಇಲ್ಲಿ ಈಗ ಹೇಳುತ್ತಾ ಇಲ್ಲ. ಅವರ ಅನುಭವದಲ್ಲಿ ಕಾಂಗ್ರೆಸ್‌ನಿಲ್ಲರುವವರು ಮಾತ್ರ ರಾಜಕೀಯ ಅನುಭವಿಗಳೆಂದು ಕಾಣುತ್ತದೆ. ಅವರು ಹೋಗಿ ವಿದ್ಯಾರ್ಥಿಗಳು ಚಳುವಳಿ ಮಾಡಿ ಎಂದು ಹೇಳಿದರೆ ಅಥವಾ ಅವರ ಕಾಂಗ್ರೆಸ್ ನಾಯಕರು ಅದಕ್ಕೆ ಮುಂದಾಳಾಗಿದ್ದರೆ ಆಗ ಏನೂ ರಾಜಕೀಯವಿಲ್ಲ. ನಾವು ಮಾಡಿದರೆ ಅಲ್ಲಿ ರಾಜಕೀಯ ಬರುತ್ತದೆ. ಮಾನ್ಯ ಶ್ರೀ ಅಡಿಗಾ ಅವರು ಐ. ಅಂಡ್ ಟಿ. ಸಿ. ಯವರ ಜೊತೆಯಲ್ಲಿ ಸಂಘಟನೆಮಾಡಿದರೆ ಆಗಲೂ ಅವರಿಗೆ ರಾಜಕೀಯವಿಲ್ಲ. ನಾನು ಅಥವಾ ಮಾನ್ಯ ಶ್ರೀ ಶ್ರೀನಿವಾಸಶೆಟ್ಟಿಯವರು ಯಾರಾದರೂ ಸಂಘಟಣೆ ಮಾಡಿದರೆ ಆಗ ನಿಜವಾಗಿ ರಾಜಕೀಯ ಬಣ್ಣ ಬರುತ್ತದೆ. ಕೇಂದ್ರ ಸರ್ಕಾರದವರೇ ಆಗಲೀ ಅಥವಾ ನಮ್ಮ ಮಾನ್ಯ ಶ್ರೀ ಗಾಂಜಿ ವೀರಪ್ಪನವರೇ ಆಗಲಿ ಇಂಥಾದ್ದಕ್ಕೆ ಉಪದೇಶ ಅಥವಾ ಒಂದು ನಿರ್ದೇಶ ಕೊಟ್ಟರೆ ಆಗಲೂ ರಾಜಕೀಯ ವಾಗುವುದಿಲ್ಲ. ಇವತ್ತು ಏನಾಗಿದೆ, ಸರ್ಕಾರದ ಸೌಕರರೂ ಸಹ ವಿರೋಧಪಕ್ಷದವರನ್ನು ಎಲ್ಲೋ ಅಪ್ರೋಚ್ ಮಾಡಿರಬಹುದು ಎಂದು ಹೇಳುವುದಾಗಿದೆ. ನಾನು ಅದನ್ನು ನಂಬುವುದಕ್ಕಾಗುವುದಿಲ್ಲ. ಈಗ ನೀವು ಏನು ಹೇಳುತ್ತೀರಿ ಅಂದರೆ, ವಿದ್ಯಾರ್ಥಿಗಳಿಗೆ ರಾಜಕೀಯ ಬೇಡ, ಕಾರ್ಮಿಕರಿಗೆ

ರಾಜಕೀಯ ಬೇಡ, ಸರ್ಕಾರದ ನೌಕರರಿಗೆ ರಾಜಕೀಯ ಬೇಡ, ಶಾಸನಕರಿಗೂ ರಾಜಕೀಯ ಬೇಡ ಅಂದರೆ ಇನ್ನು ಅದು ಯಾರಿಗೆ ಬೇಕು ಎಂದು ನಾನು ಕೇಳಬೇಕಾಗಿದೆ. ನಿಮಗೆ ಮಾತ್ರ ಅದು ಇರಬೇಕೇ? ಯಾರೂ ಇದನ್ನು ಒಪ್ಪುವುದಿಲ್ಲ. ಏಕೆಂದರೆ, ನಿಮಗೆ ಅವರೆಲ್ಲರೂ ಓಟು ಮಾಡಬೇಕು. 18 ವರ್ಷಗಳ ವಯಸ್ಕಾದವೇರೆಯೂ ಕೂಡ ಅವರನ್ನು ಇನ್ನೂ ರಾಜಕೀಯ ಬರಬೇಡಿ ಎಂದು ಹೇಳಿದರೆ ಹೇಗೆ? ಅವರನ್ನು ಬೇರೆ ಇಡಬೇಕು ಎಂದು ಹೇಳುತ್ತೀರಿ. ವಿದ್ಯಾರ್ಥಿಗಳ ಚಳುವಳಿಗೆ ಮತ್ತು ಕಾರ್ಮಿಕರ ಚಳುವಳಿಗೆ ಯಾರು ಹೋಗುವವರು ಎಂಬುದನ್ನು ನೋಡಬೇಕು. ವಿದ್ಯಾರ್ಥಿಗಳು ಯಾರೂ ರಾಜಕೀಯಕ್ಕೆ ಹೋಗುವುದಿಲ್ಲ.

ಕೊನೆಯದಾಗಿ ಒಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ಶಿಕ್ಷಣ ವಿಚಾರವಾಗಿ ನಾನು ಒಂದೆರಡು ಅಂಶಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಖರ್ಚುಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ವಿದ್ಯಾಭ್ಯಾಸ ಪ್ರಗತಿಯಾದಷ್ಟು ಬೇರೆ ಯಾವ ರಾಜ್ಯದಲ್ಲಿಯೂ ಆಗಿಲ್ಲ, ಈ ರೀತಿ ಹಿಂದೆಂದೂ ಆಗಿಲ್ಲ ಎಂದು ಆಗಿಂದಾಗ್ಗೆ ಕೆಲವು ಮಾನ್ಯ ಸದಸ್ಯರು ಹಾಗೂ ಮಾನ್ಯ ಮಂತ್ರಿಗಳು ಹೇಳಿದ್ದು ಉಂಟು. ಸೇಕಡ 20 ರಷ್ಟು ನಮ್ಮ ರೆವಿನ್ಯೂವಿನಲ್ಲಿ ಈ ಬಾಬಿಗೆ ಖರ್ಚುಮಾಡಲಾಗಿದೆಯೆಂಬುದಾಗಿ ಹೇಳಿದ್ದು ಉಂಟು. ಆಗಿಂದಾಗ್ಗೆ ತೆರಿಗೆ ಬಂದದ್ದರಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಗೆ ಹಿಂದಿನಿಂದಲೂ ಇಷ್ಟು ಭಾಗವನ್ನು ಇಟ್ಟಿದ್ದೆವು ಎಂದು ಹೇಳಿದ್ದೂ ನಿಜ. ಆದರೆ ಮುಂದಿರುವ ಸಮಸ್ಯೆ ಏನು? ಅದಕ್ಕೆ ಯಾವ ರೀತಿಯಲ್ಲಿ ಪಾಶಕ್ತ್ಯ ಕೊಟ್ಟಿದ್ದೀರಿ? ಅದು ಯಾವರೀತಿ ಫಲವನ್ನು ಕೊಟ್ಟಿದೆ ಎಂಬುದು ಮುಖ್ಯ. ನಿಮ್ಮಲ್ಲಿ ಹಣವಿತ್ತು. ಖರ್ಚುಮಾಡಿದ್ದೀರಿ. ಈ ಸರ್ಕಾರ ಬೇರೆ ಯಾವ ಸರ್ಕಾರವು ಮಾಡದೇ ಇರುವಂಥಾದ್ದನ್ನೂ ಮಾಡಿದೆ, ಅಂತಹ ಒಂದು ಯೋಜನೆ ಮಾಡಿದೆ ಅಂದರೆ ಅದು ಯಾವುದು? ಎಲ್ಲಾ ಅಧಿಕಾರವನ್ನು ತಾವೇ ಇಟ್ಟುಕೊಂಡಿದ್ದೀರಿ. ಒಂದೊಂದು ಇಲಾಖೆಗೆ ಎಷ್ಟೆಷ್ಟು ಖರ್ಚುಮಾಡಬೇಕೆಂಬುದು ಮುಖ್ಯ. ಈಗ ಇದರ ಬಗ್ಗೆ ಕಾನ್‌ಸ್ಟಿಟ್ಯೂಷನಲ್ ಡೈರೆಕ್ಟಿವ್ ಏನಿದೆ ಅದರ ಪ್ರಕಾರ ಕಂಪಲ್ಸರಿ ಪ್ರೈಮರಿ ಎಜುಕೇಷನ್ ಆಗಿರಬೇಕು. ಈಗ ಸರ್ಕಾರದವರು ಏನು ಹೇಳುತ್ತಾರೆಂದರೆ, ಅದರ ಪ್ರಕಾರ Upto 14 years of age compulsory free education ಎಂದು ಹೇಳುತ್ತಾರೆ. ಅದನ್ನು ಈಗ ಬದಲಾಯಿಸಿ ಆರರಿಂದ 14 ರವರೆಗೆ ಎಂದು ಮಾಡಿದ್ದಾರೆ. ಆದರೆ ಅದು ಕಂಪಲ್ಸರಿಯಲ್ಲ ವೆಂದು ಹೇಳುತ್ತಾರೆ. ನಾವು ಅದನ್ನು ಅಷ್ಟು ಎಚ್ಚರಿಕೆಯಿಂದ ನೋಡಿಲ್ಲ. We do not see that Constitutional directive very carefully ಆರಂಭದಲ್ಲಿ ಕಂಪಲ್ಸರಿ ಪ್ರಾಥಮಿಕ ಶಿಕ್ಷಣ ಆದರೆ ಸಾಕು, ಹಳ್ಳಿಗೆ ಒಂದು ಶಾಲೆ ಸಾಕು, ನಮ್ಮ ಊರಿಗೆ ಒಂದು ಶಾಲೆ ಬೇಕು, ಸ್ವಲ್ಪ ಹಣ ನಾವು ಕೊಡುತ್ತೇವೆಂದು ಸರ್ಕಾರದವರು ಹೇಳಿದರೆ ಅದರಿಂದ ಅಲ್ಲಿನ ಜನತೆ ಇರಲಿ ಎಂಬುದಾಗಿ ಹೇಳುತ್ತಿದ್ದರು. ಅದೂ ಅಲ್ಲವೆ ಹಳ್ಳಿಗಳಲ್ಲಿ ಶಾಲೆ ಬಂತಲ್ಲಾ, ಸಾಕು, ಎಂದು ಹೇಳುವ ಹಾಗೆ ಆಗಿದೆ, ಅದನ್ನು ತಿಳಿದಿದ್ದರೂ ಈಗ 6ರಿಂದ 11ರವರೆಗೆ ಎಂಬುದಾಗಿ ಕಂಪಲ್ಸರಿ ಮಾಡಿದ್ದಾರೆ. ಮತ್ತು 6ರಿಂದ 14ರವರೆಗೆ ಇನ್ನೂ ಕಂಪಲ್ಸರಿಯಾಗಿ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಕೆಲವರು ಈಗ ಕಾನ್‌ಸ್ಟಿಟ್ಯೂಷನಲ್ ಡೈರೆಕ್ಟಿವ್ ಪ್ರಕಾರ ಪೂರ್ತಿ ಮಾಡಿದ್ದೇವೆನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಮಂತ್ರಿಗಳು ಅದೇ ರೀತಿಯಲ್ಲಿ ಮಾತನಾಡುತ್ತಿದ್ದಾರೆ. We have fulfilled our part of the responsibility under the directive principles ಎಂದು ಹೇಳುತ್ತಾರೆ. It is not true. ನಾವು ಇದನ್ನು ನೋಡುವಾಗ ಯಾವ ದಿಕ್ಕಿನಲ್ಲಿಯೂ ಸೇಕಡ 25ರಷ್ಟು ಇಲ್ಲ. ಸೇಕಡ 30ರಷ್ಟು ಖರ್ಚುಮಾಡಿದ್ದಾರೆ. ಅದನ್ನು ಯಾವ ರೀತಿಯಲ್ಲಿ ಖರ್ಚುಮಾಡಬೇಕೆಂದು ವಿವೇಚನೆಯಿಂದ ನೋಡುತ್ತಾ ಇಲ್ಲ. ಯಾವ ದೃಷ್ಟಿ ಮತ್ತು ಗುರಿ ಇರಬೇಕೆಂಬುದು ಅದರಲ್ಲಿ ಮುಖ್ಯ. I admit resources are inadeqate. There is no plan. ಅವರೂ ಇವರಲ್ಲಿ ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ಇಲ್ಲ. Sense of planning ಏನಾದರೂ ಇವರಿಗೆ ಇದೆಯೇ ಎಂದು ಕೇಳುತ್ತೇನೆ. 6ರಿಂದ 14ರವರೆಗೆ ಎಂದು ಕಾನ್‌ಸ್ಟಿಟ್ಯೂಷನಲ್ ಡೈರೆಕ್ಟಿವ್ ಆಗಿರುವಾಗ ಅದಕ್ಕೆ ನಿಜವಾಗಿ ಬೆರೆ ಕೊಡಬೇಕು ಎಂಬುದಾಗಿ ಮೊದಲೇ ಇವರು ಹೇಳಿದರೆ, ಮೊದಲು ಅಷ್ಟೇ ಅಂದಾಜುಮಾಡಿದ್ದರೆ ಪ್ರಾಥಮಿಕ ಮತ್ತು ಹೈಯರ್ ಎಜುಕೇಷನ್ನಿಗೆ ಪ್ರತಿವರ್ಷವೂ ಹಣ ಹೆಚ್ಚಾಗಬೇಕಾಗಿತ್ತು. ಅದು ಹಿಂದೆ ಕಡಿಮೆಯಾಗುತ್ತಿತ್ತು, ಅದು ಈಗ ಸರಿ ಎಂಬುದಾಗಿ ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. Reasonable scale of expenditure should have been there. ಪ್ರೈಮರಿ ಎಜುಕೇಷನ್ ಕಂಪಲ್ಸರಿ ಮಾಡಿದಮೇಲೆ ಪೇಸ್ಸೇಜ್ ಎಲ್ಲಿಂದ ಬರುತ್ತದೆ? ಪ್ರಾಥಮಿಕ ಶಿಕ್ಷಣ 6ರಿಂದ 11ರವರೆಗೆ ಎಂಬುದಾಗಿ ಕಂಪಲ್ಸರಿ ಮಾಡಿದಮೇಲೆ ಅದರಲ್ಲಿ Percentage in total allocation ನಲ್ಲಿ let us see the pattern of expenditure. In the year

(ಶ್ರೀ ಎಂ. ಸಿ. ನರಸಿಂಹನ್)

1957-58, 50 per cent of total education budget was granted for primary education. 11 per cent to Secondary Education—Total 61 per cent In 1965-66 it was reduced to 50 per cent. ಆದ್ದರಿಂದ ಇವತ್ತು ನೀವು ಕಾನ್‌ಸ್ಟಿಟ್ಯೂಷನಲ್ ಡೈರೆಕ್ಟಿವ್ಸ್‌ಗೆ ಎಲ್ಲಿ ಬೆಲೆ ಕೊಟ್ಟಿದ್ದೀರಿ? ಕೇರಳಾದಲ್ಲಿ ನೋಡಿ. ಮೊದಲಿನಿಂದಲೂ ಅವರು ಹೈಯರ್ ಪರ್‌ಸೆಂಟೇಜ್ ಆಫ್ ರೆವಿನ್ಯೂನಲ್ಲಿ ನಮಗಿಂತಲೂ ಹೆಚ್ಚು ಪ್ರಮಾಣದಲ್ಲಿ ವಿದ್ಯಾಭ್ಯಾಸಕ್ಕಾಗಿ ಹಣವನ್ನು ಒದಗಿಸಿದ್ದಾರೆ. ಪ್ರೈಮರಿ ಮತ್ತು ಸೆಕಂಡರಿ—ಈ ಎರಡನ್ನೂ ಗಮನಿಸಿ ಅವುಗಳ ಒಂದು ಗುರಿಯನ್ನು ಮುಟ್ಟುತ್ತಿದ್ದಾರೆ. ಮೊದಲಿನಿಂದಲೂ ಮೊದಲನೆಯ ಪ್ಲಾನಿನಿಂದಲೂ ಆ ರೀತಿಯಾಗಿ ಅವರು ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರೇ ಆಗಿರಲಿ. ಕಾಂಗ್ರೆಸ್‌ನವರೇ ಆಗಿರಲಿ, ಪಿ.ಎಸ್.ಪಿ. ಯವರಾಗಿರಲಿ ಅಥವಾ ಬೇರೆ ಪಕ್ಷದವರು ಯಾರೇ ಆಗಿರಲಿ ಆ ರೀತಿಯಾಗಿ ಗಮನ ಕೊಡುತ್ತಿದ್ದಾರೆ. That the Constitutional directive has not been obeyed in the field of education is my submission ಅದಕ್ಕೆ ತಕ್ಕಹಾಗೆ ಟೆಕ್ನಿಕಲ್ ಎಜ್ಯುಕೇಷನ್ನಿಗೆ ಜಾಸ್ತಿ ಹಣವನ್ನು ಕೊಡುತ್ತಿದ್ದಾರೆ.

1-00 P.M.

ಆ ಬಗ್ಗೆ ಸರ್ಕಾರದವರು ಒಂದು ಖಂಡಿತವಾದ ನಿರ್ಧಾರ ತೆಗೆದುಕೊಳ್ಳಲಿಲ್ಲ. There is unemployment among engineers, among the S.S.L.Cs and among diploma holders on very big scale. ಆದ್ದರಿಂದ ಆ ಸಂಸ್ಥೆಗಳನ್ನು ಕೆಲವು ಕಾಲದ ವರೆಗೆ ಮುಚ್ಚಿಬಿಡಿ, ಇಲ್ಲದಿದ್ದರೆ ಅವುಗಳ ಸಂಖ್ಯೆಯನ್ನು ಕಡಿಮೆ ಮಾಡಿ. ಶ್ರೀ ಮಾನ್ ಶಾಸ್ತ್ರಿಗಳು ಹೇಳುತ್ತಿದ್ದರು ರೆಕ್ರೂಟ್‌ಮೆಂಟ್ ಮಾಡುವುದನ್ನು 30 ಪರ್ಸೆಂಟ್ ಕಡಿಮೆ ಮಾಡಿ ಎಂದು. ಅವರ ಸೂಚನೆ ಬಹಳ ಅಪಾಯಕಾರಿಯಾದುದು. ಜ್ಯೂನಿಯರ್ ಪಾಲಿಟೆಕ್ನಿಕ್ ವಿಷಯದಲ್ಲಿ ಹೇಳಬೇಕಾಗಿದ್ದರೆ ಕೆಲವು ಜಾಗಗಳಲ್ಲಿ ಪೊಲಿಟಿಕಲ್ ಕನ್‌ಸಿಡರೇಷನ್ನಿಗೋಸ್ಕರ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಿದರು. ಆ ಸ್ಥಳಗಳಲ್ಲಿ ಹೈಸ್ಕೂಲುಗಳು ಇಲ್ಲದಿದ್ದರೂ ಆ ಸ್ಥಳಗಳಲ್ಲಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಿದರು. ಈಗ ಅವುಗಳನ್ನು ಮುಚ್ಚಿ ಎಂದು ಹೇಳುತ್ತಿದ್ದಾರೆ. Very dengerous situation will prevail. This is a temporary phenomenon. ಇಪ್ಪೊತ್ತು ಆ ವಿದ್ಯಾಭ್ಯಾಸವನ್ನು ಕೊಟ್ಟರೂ ಕೂಡ ಇನ್ನು ಎರಡು ಮೂರು ವರ್ಷಗಳಲ್ಲಿ ನಮ್ಮಲ್ಲಿ ದೊಡ್ಡ ಕೈಗಾರಿಕೆಗಳು ಬರುತ್ತವೆ. ಅದಕ್ಕೆ ಅವಕಾಶ ಇರಬೇಕು. ಇಷ್ಟು ಹೇಳಿ ಈ ಬಡ್ಜೆಟ್ ಆಶಾದಾಯಕವಾದ ಬಡ್ಜೆಟ್ ಎಂದು ಹೇಳುವುದಕ್ಕೆ ನನಗೆ ಬರುವುದಿಲ್ಲ. ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY CHAIRMAN.—The House will now stand adjourned to re-assemble on Monday the 11th March 1968.

The House adjourned at Two Minutes past One of the Clock to meet again at Fifteen Minutes past Two of the Clock on Monday, the 11th March 1968.

WD 10601—GPB—600—6-8-1968